ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ಬಳ್ಳಾರಿ


ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ಡಾ. ಮೃತ್ಯುಂಜಯ ರುಮಾಲೆ**

ಲೇಖಕರು

**ಡಾ. ಮೃತ್ಯುಂಜಯ ರುಮಾಲೆ**



**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨

ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦

www.karnatakasahithyaacademy.org

ಇ–ಮೇಲ್: sahithya.academy@gmail.com

**BALLARI:** An Introducing Book on the Places in Karnataka that Played a Major Role in the Freedom struggle, Written by Dr. Mruthyunjaya Rumale, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಡಾ. ಮೃತ್ಯುಂಜಯ ರುಮಾಲೆ

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೪೮


ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೩೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು-560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



# ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ, ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ಭಾರತ ದೇಶ ಸ್ವತಂತ್ರಗೊಂಡು ಎಪ್ಪತ್ತನಾಲ್ಕು ಸಂವತ್ಸರಗಳನ್ನು ಪೂರೈಸಿ ಎಪ್ಪತ್ತೈದರ ಸಂವತ್ಸರಕ್ಕೆ ಪಾದ ಇಡುವ ಚಾರಿತ್ರಿಕ ಸಂದರ್ಭದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯಂಥ ಸೃಷ್ಟಿಶೀಲ ನೆಲೆಯ ಸಂಸ್ಥೆಯೊಂದು ತನ್ನ ಹೊಣೆಗಾರಿಕೆಯನ್ನು ಈ ರೀತಿ ಸ್ಪಂದಿಸುತ್ತಿರುವುದು ಅರ್ಥಪೂರ್ಣವಾದ ಮತ್ತು ನಮ್ಮ ಸ್ವಾತಂತ್ರ್ಯ ಹೋರಾಟಗಾರರಿಗೆ ಸಲ್ಲಿಸುವ ಗೌರವವಾಗಿದೆ. ಹತ್ತೊಂಭತ್ತು–ಇಪ್ಪತ್ತನೆಯ ಶತಮಾನದಲ್ಲಿ ನಡೆದ ದೇಶದ ಸ್ವಾತಂತ್ರ್ಯ ಹೋರಾಟವು ನಮ್ಮ ಯುವಜನತೆಗೆ, ವಿದ್ಯಾರ್ಥಿಗಳಿಗೆ ತಿಳಿಯಬೇಕಾಗಿದೆ. ವಿದ್ಯುನ್ಮಾನವನ್ನೇ ನಂಬಿಕೊಂಡು ಬದುಕುತ್ತಿರುವ ನಮ್ಮ ಕಾಲದ ಯುವಜನರು–ತೃತೀಯ ಜಗತ್ತಿನ ಪ್ರಜೆಗಳೂ ನಾಗರಿಕರೂ ಆಗಿ ನೆಲದ ಸಂಸ್ಕೃತಿಯನ್ನು ನಾಡು–ನುಡಿಯ ಬಗೆಗಿನ ಅಭಿಮಾನವನ್ನು, ಭಾರತ–ಭಾರತೀಯ ಮನೋಧರ್ಮವನ್ನು ಮೂಡಿಸಿಕೊಳ್ಳಲು "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಈ ಮಾಲಿಕೆಯ ೭೫ ಪುಸ್ತಿಕೆಗಳು ನೆರವಾಗುತ್ತವೆ.

ಈ ಮಾಲಿಕೆಯಲ್ಲಿ ಪ್ರಕಟವಾಗುತ್ತಿರುವ “ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ – ಬಳ್ಳಾರಿ” ಕೃತಿಯು ಒಂದು ಸ್ಥೂಲ ಚಿತ್ರವನ್ನು ನೀಡುತ್ತಿದೆ.

ಈ ವರೆಗೂ ಈ ಸಂಬಂಧವಾಗಿ ಬಂದ ಕೃತಿಗಳನ್ನು ಪರಶೀಲಿಸಿ ಇದನ್ನು ಸಿದ್ಧಪಡಿಸಲಾಗಿದೆ. ನಾನು ಬೆಲ್ಲದ ಚೆನ್ನಪ್ಪ, ಬಿ.ಜಿ.ಗದಿಗೆಪ್ಪ, ಮುದೇನೂರ ಸಂಗಣ್ಣನವರಂಥ ಸ್ವಾತಂತ್ರ್ಯ ಹೋರಾಟಗಾರರನ್ನು ಪ್ರಾಸಂಗಿಕವಾಗಿ ಸಂದರ್ಶಿಸಿದ ಸಂದರ್ಭದಲ್ಲಿ ಸಂಗ್ರಹಿಸಿದ್ದ ಮಾಹಿತಿಗಳನ್ನು ಸಾಂದರ್ಭಿಕವಾಗಿ ಸೇರಿಸಿದ್ದೇನೆ. ಒಂದು ಅರ್ಥದಲ್ಲಿ ಸಾಧಾರಪೂರ್ವಕ ಮಾಹಿತಿಗಳ ಕ್ರೋಢೀಕೃತ ರೂಪವೇ ಈ ಪುಸ್ತಿಕೆ. ಪುಸ್ತಿಕೆಯ ಅಕ್ಷರ ಜೋಡಣೆ ಮಾಡಿಕೊಟ್ಟ ಶ್ರೀ ಪ್ರಕಾಶ ಗಿರಿಮಲ್ಲನವರಿಗೆ ನನ್ನ ಧನ್ಯವಾದಗಳು.

ಕರ್ನಾಟಕ ಸಾಹಿತ್ಯ ಅಕಾಡೆಮಿಯನ್ನು ಒಂದು ಖಚಿತ ಬದ್ಧತೆಯಲ್ಲಿ ಮುನ್ನಡೆಸುತ್ತಿರುವ ಅಧ್ಯಕ್ಷರಾದ ಡಾ. ಬಿ. ವಿ. ವಸಂತಕುಮಾರ ಅವರಿಗೂ, ರಿಜಿಸ್ಟ್ರಾರ್ ಶ್ರೀ ಎನ್. ಕರಿಯಪ್ಪನವರಿಗೂ ಮತ್ತು ಈ ಮಾಲಿಕೆಯಲ್ಲಿ ನನ್ನೊಂದಿಗೆ ಸಂಪಾದಕರಾಗಿರುವ ಡಾ. ಎಸ್.ಜಿ.ರಾಮದಾಸರೆಡ್ಡಿ, ಡಾ. ಪ್ರಕಾಶ ಗ. ಖಾಡೆ, ಶ್ರೀ ಎಸ್.ಎಸ್. ನರೇಂದ್ರಕುಮಾರ ಮತ್ತು ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು ಅವರಿಗೂ ನನ್ನ ಕೃತಜ್ಞತೆಗಳು.

ಹೊಸಪೇಟೆ — **ಡಾ. ಮೃತ್ಯುಂಜಯ ರುಮಾಲೆ**

೫೮೩೨೦೧

## ಪರಿವಿಡಿ


| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೧ |
| ಸ್ವಾತಂತ್ರ್ಯ ಹೋರಾಟ ಮತ್ತು ಬಳ್ಳಾರಿ | ೧೫ |
| ೧೯೨೦ | ೨೧ |
| ೧೯೨೪ | ೨೩ |
| ೧೯೩೦ | ೨೪ |
| ಕಲ್ಲೂರ ಸುಬ್ಬರಾವ್ | ೩೧ |
| ತಾಡಪತ್ರಿ ವೆಂಕಟರಮಣಾಚಾರ್ಯ | ೩೧ |
| ಡಿ.ಎಚ್.ವೆಂಕೋಬರಾವ್ | ೩೧ |
| ಕಲ್ಗಣಿ ಶಿವರುದ್ರಪ್ಪ | ೩೧ |
| ಟೇಕೂರು ನಾರಾಯಣ ಶಾಸ್ತ್ರಿ | ೩೨ |
| ೧೯೩೪ | ೩೩ |
| ೧೯೪೨ | ೩೭ |
| ೧೯೪೨–೪೩ | ೪೧ |
| ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೪೫ |

# ಸ್ವಾತಂತ್ರ್ಯ ಹೋರಾಟ ಮತ್ತು ಬಳ್ಳಾರಿ

ಕ್ರಿ.ಶ.೧೮೦೦ರಲ್ಲಿ ಇಪ್ಪತ್ತು ತಾಲೂಕುಗಳ (ಗುತ್ತಿ, ಯಾದಿಕಿ, ಚೆನ್ನಮ್ಮಪಳ್ಳಿ, ರಾಯದುರ್ಗ, ತಾಡಮಾರಿ, ತಾಡಪತ್ರಿ, ಅನಂತಪುರ, ಕೋಡಿಕೊಂಡ, ಧರ್ಮಾವರಂ, ಪೆನುಗೊಂಡ, ಮಡಕಶಿರಾ, ಕಂಪ್ಲಿ, ಹರಪನಹಳ್ಳಿ, ಹಡಗಲಿ, ಬಳ್ಳಾರಿ, ಕೂಡ್ಲಿಗಿ, ನಾಗಲದಿನ್ನೆ, ಪಂಚಪಳ್ಳಿ, ಗೂಳ್ಯಂ ಮತ್ತು ಆದವಾನಿ. ಈ ಜಿಲ್ಲಾ ವ್ಯಾಪ್ತಿಯಲ್ಲಿ ಸಂಡೂರು ಇದ್ದಿತ್ತಾದರೂ ಸಂಸ್ಥಾನವಾಗಿ ಅಸ್ತಿತ್ವದಲ್ಲಿದ್ದುದರಿಂದ ಜಿಲ್ಲೆ ಆಡಳಿತದಲ್ಲಿರಲಿಲ್ಲ. ಹೊಸಪೇಟೆ–ಕಂಪ್ಲಿ ತಾಲೂಕಿನ ಹೋಬಳಿಯಾಗಿತ್ತು) ಬಳ್ಳಾರಿ ಜಿಲ್ಲೆ ರಚನೆಯಾಗಿತ್ತು. ಸ್ವಾತಂತ್ರ್ಯೋತ್ತರ ಮತ್ತು ಏಕೀಕರಣೋತ್ತರ ಜಿಲ್ಲೆಯು ಸ್ವಾತಂತ್ರ್ಯ ಮತ್ತು ಏಕೀಕರಣ ಪೂರ್ವದ ವಿಶಾಲ ಬಳ್ಳಾರಿ ಜಿಲ್ಲೆಯ ಒಂದು ಭಾಗವಾಗಿತ್ತು! ದೇಶದ ವಿಶಾಲ ಭೌಗೋಳಿಕ ವ್ಯಾಪ್ತಿಯ (ಇಂದಿನ ಸಂಪೂರ್ಣ ತಮಿಳುನಾಡು, ಆಂಧ್ರ ಪ್ರದೇಶದ ಬಹುಭಾಗ, ಕೇರಳದ ಕೆಲವು ಜಿಲ್ಲೆಗಳು ಮತ್ತು ಕನ್ನಡ ನಾಡಿನ ಬಳ್ಳಾರಿ ಜಿಲ್ಲೆ ಹಾಗೂ ಮಂಗಳೂರು ಜಿಲ್ಲೆಗಳು) ಮದ್ರಾಸ್ ಪ್ರಾವಿನ್ಸಿಯ ವಿಶಾಲ ಜಿಲ್ಲೆಯಾಗಿ ಸೇರ್ಪಡೆಯೂ ಆಯಿತು. ಈ ಸಂದರ್ಭದ ಹಿಂದೆ ಅಧಿಕಾರ ರಾಜನೀತಿಯ ತಂತ್ರಗಾರಿಕೆಯು ಹಿನ್ನೆಲೆಯಾಗಿದೆ.

ಮೈಸೂರು ಕೇಂದ್ರಿತ ಸಂಸ್ಥಾನವು ಹೈದರಾಲಿಯ (೧೭೬೮–೧೭೮೨), ಟೀಪೂ ಸುಲ್ತಾನನ (೧೭೮೨–೧೭೯೯) ಆಳ್ವಿಕೆಯಲ್ಲಿತ್ತು. ಅಧಿಕಾರಾಕಾಂಕ್ಷೆಯಿಂದ ಸಂಸ್ಥಾನವನ್ನು ವಿಸ್ತರಿಸುತ್ತಿದ್ದಾಗ, ಬಳ್ಳಾರಿ–ಧಾರವಾಡದವರೆಗೂ ದಾಳಿ ಮೂಲಕ ವಶಪಡಿಸಿಕೊಳ್ಳುತ್ತಿದ್ದಾಗ, ಮರಾಠರಿಗೂ (ಪೇಶ್ವೆ) ಹೈದರಾಬಾದ್‌ನ ನಿಜಾಮನಿಗೂ ಅಸ್ತಿತ್ವದ ಪ್ರಶ್ನೆ ಕಾಡುತ್ತಿದ್ದುದನ್ನು ಗಮನಿಸಿದ ಬ್ರಿಟೀಶರ ಸಹಾಯಕ ಸೈನ್ಯ ಪದ್ಧತಿಯ ಉಪಾಯವನ್ನು ಪ್ರಯೋಗಿಸಿದರು. ಬಳ್ಳಾರಿಯ ಒಂದು ಭಾಗದಲ್ಲಿ ರಕ್ಷಣಾರ್ಥವಾಗಿ ಸೈನ್ಯದ ತುಕಡಿಯನ್ನು ಇರಿಸಲಾಗಿತ್ತು. ಅದನ್ನು

"ದಂಡು ಪ್ರದೇಶ' (Contonment area) ಎಂದು ಕರೆಯಲಾಗುತ್ತಿತ್ತು. ಸಂಸ್ಥಾನದ ಗಡಿಯಾಗಿದ್ದ ಬಳ್ಳಾರಿ ಕೇಂದ್ರದಲ್ಲಿ ಒಪ್ಪಂದದ ಭಾಗವಾಗಿ ಬಳ್ಳಾರಿ, ಅನಂತಪುರ, ಕಡಪಾ ಮತ್ತು ಕರ್ನೂಲ್ ಜಿಲ್ಲೆಗಳು ತಾತ್ಕಾಲಿಕವಾಗಿ ನಿಜಾಮನ ವಶಕ್ಕೆ ನೀಡಲಾಗಿತ್ತು. ೧೭೯೨ರಿಂದ ೧೮೦೨ರವರೆಗೆ ನಿಜಾಮನಿಂದ ದತ್ತುವಾಗಿ ಈ ಜಿಲ್ಲೆಗಳನ್ನು ಪಡೆದು ಮದ್ರಾಸ್ ಪ್ರಾವೆನ್ಸಿಗೆ ಸೇರಿಸಲಾಯಿತು. Bellary (B), Ananthapur (A), Cuddapha (C) ಮತ್ತು Karnool (K)- ಈ BACK ಜಿಲ್ಲೆಗಳನ್ನು ಎಂದೂ, ದತ್ತು ಮಂಡಲವೆಂದೂ ದತ್ತು ಜಿಲ್ಲೆಗಳೂ ಎಂದೂ ಕರೆಯಲಾಗುತ್ತಿತ್ತು. ಟೀಪೂ ತೀರಿದನಂತರ (೪ ಮೇ ೧೭೯೯) ಬಳ್ಳಾರಿ ಜಿಲ್ಲೆಯನ್ನು (೧೮೦೦)ರಲ್ಲಿ ರಚಿಸಲಾಯಿತು.

ಚಾರಿತ್ರಿಕ ಸಂದರ್ಭವಾಗಿ ಮುಖ್ಯ ವಿಚಾರವನ್ನು ಇಲ್ಲಿ ಗಮನಿಸಬೇಕು. ಸಹಾಯಕ ಸೈನ್ಯ ಪದ್ಧತಿಗೆ ಪರಸ್ಪರವಾದ ಒಪ್ಪಂದವು ಟೀಪೂವಿನ ಪ್ರಾಬಲ್ಯದಿಂದ ಅಸ್ತಿತ್ವದ ಭಯ ಕಾಡಿದ್ದರಿಂದಲೇ ಹೊರತು ಅಧಿಕಾರದ ಯುದ್ಧ ನೀತಿಗೆ ಸಹಮತವನ್ನು ವ್ಯಕ್ತಪಡಿಸಿಯಲ್ಲ. ಒಪ್ಪಂದದ ಪರಿಣಾಮವಾಗಿ ಟೀಪೂವಿನ ಸಾವು ಮುಖ್ಯವಾಗಿತ್ತೇ ವಿನಾ ಒಪ್ಪಂದದ ವಿಜಯ ಮುಖ್ಯವಾಗಿರಲಿಲ್ಲ. ಈ ಸಂದರ್ಭದಲ್ಲಿ ಬಳ್ಳಾರಿಯು ಸಂಬಂಧಿಸಿದಂತೆ ಮೂರು ಸಂಭವನೀಯ ನಿರ್ಣಯಗಳಿಗೆ ಒಳಗಾಗಬೇಕಾಗಿತ್ತು. ಬಳ್ಳಾರಿ ನಿಜಾಮನ ಆಡಳಿತ ವ್ಯಾಪ್ತಿಯಲ್ಲಿಯೇ ಉಳಿಯದೇ ಇದ್ದುದು ಸಮಾಧಾನದ ವಿಷಯವಾದರೆ, ಮೈಸೂರು ಸಂಸ್ಥಾನಕ್ಕೆ ಸೇರದೇ ಇದ್ದುದು ದುರಾದೃಷ್ಟದ ವಿಷಯ. ಆದರೆ, ಇದ್ದುದರಲ್ಲಿಯೇ ಬ್ರಿಟೀಶ್ ಆಡಳಿತ ವ್ಯವಸ್ಥೆಯ ಮದ್ರಾಸ್ ಪ್ರಾವೆನ್ಸಿಗೆ ಸೇರಿದ್ದುದು ಅವಶ್ಯವಾದುದಕ್ಕಿಂಲೂ ಅನಿವಾರ್ಯ ಸಂದರ್ಭವೇ ಆಗಿತ್ತು. ಚರಿತ್ರೆಯಲ್ಲಿಯೇ ಮೊದಲ ಬಾರಿಗೆ ಬಳ್ಳಾರಿ ಕೇಂದ್ರದಲ್ಲಿ ಜಿಲ್ಲೆಯು ನಕ್ಷೆಯನ್ನು ಕಂಡಿತ್ತು. ಮೊದಲ ಪ್ರಧಾನ ಜಿಲ್ಲಾಧಿಕಾರಿ (Principal Collector) (ಸರ್) ಥಾಮಸ್ ಮನ್ರೋ ಬಳ್ಳಾರಿಗೆ ಬಂದಿಳಿದಾಗ, ತನ್ನ ಖಾಸಗಿ ಬರೆವಣಿಗೆ (೧೮೦೩) ಹೀಗೆ ಹೇಳುತ್ತಾನೆ. "Bellary is a poor place and was almost desolate before the arrival of troops"

ಬಳ್ಳಾರಿ ಜಿಲ್ಲೆ ನಿಜಾಮನ ಆಡಳಿತ ವ್ಯಾಪ್ತಿಯಲ್ಲಿದ್ದಿದ್ದರೆ, ನಿಜಾಮನ ದುರಾಡಳಿತದ ವಿರುದ್ಧವೂ ಬ್ರಿಟೀಶರ ಆಡಳಿತ ನೀತಿಯ ವಿರುದ್ಧವೂ



ಹೋರಾಡಬೇಕಾಗುತ್ತಿತ್ತು. ಮೈಸೂರು ಸಂಸ್ಥಾನಕ್ಕೆ ಸೇರಿಸಿದ್ದರೆ, ಮೂಲಭೂತ ಸುಖಾನುಕೂಲಗಳನ್ನು ಅನುಭವಿಸುತ್ತಲೇ ಬ್ರಿಟೀಶ ಆಡಳಿತಕ್ಕೆ ಅಸಮಾಧಾನ ವನ್ನೂ ವ್ಯಕ್ತಮಾಡಬಹುದಾಗಿತ್ತು. ಮದ್ರಾಸ್ ಪ್ರಾವೆನ್ಸಿಗೆ ಸೇರಿಸಿದ್ದರಿಂದ "ಸ್ವಾತಂತ್ರ್ಯ ಹೋರಾಟ" ನಿಧಾನಗತಿಯಲ್ಲಿ ಸಾಗಬೇಕಾಯಿತು. ಇದಕ್ಕೆ ಹಲವು ಕಾರಣಗಳೂ ಇವೆ. ಬಳ್ಳಾರಿ ಜಿಲ್ಲೆಯಾಗಿದ್ದರಿಂದ ಶಿಕ್ಷಣ, ಆರೋಗ್ಯವೂ ಸೇರಿದಂತೆ ಮೂಲಭೂತ ಸೌಲಭ್ಯಗಳು ಅವಜ್ಞೆಗೊಳಗಾಗಿದ್ದವು. ದೂರದ ಆಡಳಿತ ಕೇಂದ್ರದೊಂದಿಗೆ ತನ್ನದಲ್ಲದ ಭಾಷೆಗಳೊಂದಿಗೆ ಒಡನಾಟವಿರಿಸಿಕೊಂಡಿದ್ದರಿಂದ ಸ್ವತಃ ಜಿಲ್ಲೆ ಅನಾಸಕ್ತಿ, ಅಸಹಾಯಕತೆಗಳಿಂದ ಇದ್ದುದರಿಂದ ಅರಾಜಕತೆ, ಅವೈಜ್ಞಾನಿಕ ಪದ್ಧತಿಗೊಳಗಾಗಿತ್ತು. ಜಿಲ್ಲೆಯ ಪಶ್ಚಿಮ ಮತ್ತು ಉತ್ತರ ಭಾಗಗಳಲ್ಲಿ ಉರ್ದು ಪ್ರಾಧಾನ್ಯದ ನಿಜಾಮನ ಆಳ್ವಿಕೆಯೂ, ಪೂರ್ವದಲ್ಲಿ ತೆಲುಗು ಪ್ರಾಬಲ್ಯದ ಆಂಧ್ರ ಪ್ರದೇಶವೂ, ದಕ್ಷಿಣದಲ್ಲಿ ಮೈಸೂರು ಸಂಸ್ಥಾನವೂ ಇದ್ದುದರಿಂದ ಬಳ್ಳಾರಿ ಜಿಲ್ಲೆ ತನ್ನನ್ನು ತಾನು ಅರ್ಥಮಾಡಿಕೊಳ್ಳಲು ನಿಕಷಗೊಳ್ಳಬೇಕಾಗಿತ್ತು. ಮನೆಯಲ್ಲಿ ಮಾತೃ ಭಾಷೆ ಕನ್ನಡ, ಶಾಲೆಯಲ್ಲಿ ಶಿಕ್ಷಣ ಮಾಧ್ಯಮ ತೆಲುಗು, ಕಛೇರಿಯಲ್ಲಿ ಆಡಳಿತದ ಭಾಷೆ ತಮಿಳು–ಸಾಮಾಜಿಕವಾದ ವಹಿವಾಟಿನಲ್ಲಿಯೂ ಇದ್ದವು. ಭಾಷೆ, ಶಿಕ್ಷಣ, ನಾಗರಿಕತೆ, ಆಡಳಿತ ಮೊದಲಾದ ಕ್ಷೇತ್ರಗಳಲ್ಲಿ ಬಳ್ಳಾರಿ ತನ್ನನ್ನು ಎಚ್ಚರವಾಗಿರಿಸಿಕೊಳ್ಳಲು ಸಾವಕಾಶವನ್ನೇ ಸೃಷ್ಟಿಸಿಕೊಂಡಿತ್ತು. ಇದರ ಜೊತೆಗೆ ೧೮೧೦, ೧೮೨೧, ೧೮೫೮, ೧೮೫೯, ೧೮೭೨ರಲ್ಲಿ ಜಿಲ್ಲೆಯ ತಾಲೂಕುಗಳನ್ನು ಅವೈಜ್ಞಾನಿಕವಾಗಿ ಬೇರ್ಪಡಿಸುವ, ಜೋಡಿಸುವ, ಮರು ವಿಂಗಡಿಸುವ ಕಾರ್ಯಗಳನ್ನು ಮಾಡಿದ್ದರಿಂದ ಸಹಜವಾಗಿ ಮೂಲಭೂತ ಸೌಕರ್ಯಗಳು ಕುಂಠಿತಗೊಂಡವು. ಜನರಲ್ಲಿ ನಾಡು, ಭಾಷೆ, ದೇಶಗಳ ಚಿಂತನೆ ಮೂಡುವುದು ನಿಧಾನಗತಿಯಲ್ಲಿ ಮುಂದುವರೆದಿದ್ದವು. ೧೮೦೦ ರಿಂದ ೧೯೫೩ರವರೆಗೂ ಬಳ್ಳಾರಿ ಜಿಲ್ಲೆ ಒಂದು ಖಚಿತ ನಕ್ಷೆಯ ಸ್ವರೂಪ ಪಡೆದಿರಲಿಲ್ಲ. ಕೆಲವೊಮ್ಮೆ ತಾಲೂಕುಗಳ ವ್ಯಾಪ್ತಿ ಬದಲಾಗುತ್ತಿದ್ದರೆ, ಒಂದೆರಡು ಬಾರಿ ಜಿಲ್ಲೆಯ ಭೌಗೋಳಿಕ ವ್ಯಾಪ್ತಿಯೂ ಬದಲಾಯಿಸಲ್ಪಟ್ಟಿತು. ೧೮೦೦ ರಿಂದ ೧೯೪೭ ರವರೆಗೆ ಈಸ್ಟ್ ಇಂಡಿಯಾ ಕಂಪನಿ ಮತ್ತು ಬ್ರಿಟೀಶ್ ಚಕ್ರಾಧಿಪತ್ಯವು ಮದ್ರಾಸ್ ಪ್ರಾವೆನ್ಸಿಯನ್ನು ಆಡಳಿತ ಕೇಂದ್ರ ಮಾಡಿಕೊಂಡಿದ್ದವು. ಆ ಮೂಲಕ ಬಳ್ಳಾರಿಯು ಇವುಗಳ ವಶದಲ್ಲಿತ್ತು. ಮೊದಲ ಕಲೆಕ್ಟರ್ ಥಾಮಸ್ ಮನ್ರೋ ಕರ ತೆರಿಗೆ

ಸಂಗ್ರಹಕ್ಕಾಗಿ ಪಾಳೆಯ ಪಟ್ಟುಗಳ ಮತ್ತು ಜಮೀನುದಾರರ ಮೇಲೆ ಬಿಗಿ ಹಿಡಿತ ಸಾಧಿಸಲು ಮಾಡಿದ ದಿಟ್ಟ ಕ್ರಮಗಳು ಜನರ ಸಂಘಟನೆಗೆ ಅವಕಾಶ ನೀಡಿರಲಿಲ್ಲ. ಹೀಗಾಗಿ ಜಿಲ್ಲೆ ರಚನೆಗಾಗಿ ಐದು ದಶಕಗಳವರೆಗೆ ಸಾಮುದಾಯಿಕ ಜಾಗೃತಿ ದುಸ್ಸಾಹಸವೇ ಎನಿಸಿತು.

ಇಂಥ ದುರ್ಭರ ಸಂದರ್ಭದಲ್ಲಿ ಜಿಲ್ಲೆಯಲ್ಲಿ ಮೊದಲ ಬಾರಿಗೆ ಬ್ರಿಟೀಶ್ ಆಡಳಿತ ನೀತಿ ವಿರೋಧ ವ್ಯಕ್ತವಾಗಿದ್ದು ಮುಂಡರಗಿ ಭೀಮರಾಯನಿಂದ. ಮರಾಠರ ಪೇಶ್ವೆಯವರ ಆಳ್ವಿಕೆಯಲ್ಲಿ ನ್ಯಾಯಾಧೀಶರಾಗಿದ್ದ ಭೀಮರಾಯನ ತಂದೆಯವರು ಆಳರಸರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದರು. ಈ ಹಿನ್ನೆಲೆಯಲ್ಲಿದ್ದ ಭೀಮರಾಯನಿಗೆ ಮುಂಬಯಿ ಪ್ರಾಂತದಲ್ಲಿ ವಿದ್ಯಾಭ್ಯಾಸವೂ ಆಗಿತ್ತು. ಕನ್ನಡ ಮಾತೃಭಾಷೆಯ ಈತನಿಗೆ ಮರಾಠಿ, ಇಂಗ್ಲಿಷ್ ಭಾಷೆಯೂ ತಿಳಿದಿದ್ದರಿಂದ ದೇಶದ ಆಗುಹೋಗುಗಳ ಬಗ್ಗೆ ವಸ್ತುನಿಷ್ಠವಾದ ಗ್ರಹಿಕೆಯೂ ಇತ್ತು. ಹೀಗಾಗಿ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ, ಬಳ್ಳಾರಿ ಭಾಗಗಳಲ್ಲಿ ತಹಶೀಲದಾರರಾಗಿ ಕಾರ್ಯನಿರ್ವಹಿಸುತ್ತಿದ್ದರು. ೧೮೫೮ರಲ್ಲಿ ರಾಜದ್ರೋಹದ ಚಟುವಟಿಕೆಗಳೆಂದು ವೃಥಾರೋಪ ಮಾಡಿ ಭೀಮರಾಯನನ್ನು ಹುದ್ದೆಯಿಂದ ನಿರ್ಗಮಿಸುವಂತೆ ಮಾಡಲಾಯಿತು. ಸ್ವತಂತ್ರ ಮನೋಭಾವ, ಕಾರ್ಯತತ್ಪರತೆ, ಆತ್ಮಾಭಿಮಾನಗಳನ್ನು ತನ್ನ ವ್ಯಕ್ತಿತ್ವದಲ್ಲಿ ರೂಪಿಸಿಕೊಂಡಿದ್ದ ಭೀಮರಾಯ ಹತಾಶನಾಗದೇ, ಪೇಶ್ವೆಯವರ ಪರಾವಲಂಬಿ ಧೋರಣೆ, ಬ್ರಿಟೀಶ್‌ರ ಆಡಳಿತ ನೀತಿಯನ್ನು ವಿರೋಧಿಸಿ ಬಂಡಾಯ ಹೂಡಿದನು. ೧೮೫೭ರ ದೇಶದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಭೀಮರಾಯ ಮುಂಬಯಿ ಪ್ರಾಂತದಲ್ಲಿ ಪ್ರವೇಶವಿರದಿದ್ದರಿಂದ ಬಳ್ಳಾರಿ ಜಿಲ್ಲೆಯ ಹೊಸಪೇಟೆ, ಕಮಲಾಪುರಗಳಲ್ಲಿ ಸಂಘಟನೆಗೆ ತೊಡಗಿದ. ಹಮ್ಮಿಗೆ, ಸೊರಟೂರು, ಡಂಬಳ ದೇಶಗತಿಯ ಸ್ವಾತಂತ್ರ್ಯ ಮನೋಭಾವದ ಉತ್ಸಾಹಿ ಯುವಕರ ಜೊತೆಗೆ ಸ್ಥಳೀಯರು ಈ ಗುಂಪಿನಲ್ಲಿ ಸೇರಿದರು. ತಂತ್ರ ರೂಪಿಸಿ ಗುಪ್ತ ಚಟುಚಟಿಕೆಗಳನ್ನು ನಡೆಸಿದರು. ಬಳ್ಳಾರಿ ಜಿಲ್ಲಾ ಪರಿಸರದಿಂದ ಒಂದು ನೂರಾ ಐವತ್ತಕ್ಕೂ ಹೆಚ್ಚು ಯುವಕರು ಸೇರಿದರು. ಅಧಿಕಾರಶಾಹಿಗೆ ಬಿಸಿ ತಟ್ಟಿದಾಗ ಇದನ್ನು ಗಂಭೀರವಾಗಿ ಪರಿಗಣಿಸಿದರು. ನಿಜಾಮನ ನೆರವು ಪಡೆದ ಬ್ರಿಟೀಶರು ೧೮೫೮ರಲ್ಲಿ ಈ ಹೋರಾಟಗಾರರ ಮೇಲೆ ದಾಳಿ ಮಾಡಿದರು. ಭೀಮರಾಯನ ಸಹಚರನ



ಪಿತೂರಿಯಿಂದ ಹಮ್ಮಿಗೆ ದೇಶಗತಿಯ ಕೆಂಚನಗೌಡ, ಮುಂಡರಗಿ ಭೀಮರಾಯ ಹೋರಾಟದ ಸಂದರ್ಭದಲ್ಲಿಯೇ ಮಡಿದರು. ಪ್ರಾಣಾರ್ಪಣೆ ಮಾಡಿದ ಎಪ್ಪತ್ತೇಳು ಕ್ರಾಂತಿಕಾರರಲ್ಲಿ ಹದಿಮೂರು ಜನ ಬಳ್ಳಾರಿ ಜಿಲ್ಲೆಯವರೂ ಇದ್ದರು. ಹಲವರಿಗೆ ಜೈಲು ಶಿಕ್ಷೆಯನ್ನು ವಿಧಿಸಿದರು. ಉತ್ಸಾಹ, ದೇಶಾಭಿಮಾನವನ್ನು ಜೀವಂತವಾಗಿರಿಸಲು ಯತ್ನಿಸಿ ನಿರಂತರ ಹೋರಾಟ ಮಾಡುತ್ತಿದ್ದ ಭೀಮರಾಯನ ಅನುಯಾಯಿಗಳಾದ ಹಡಗಲಿಯ ಮೀರಾ ಕೋರ್ನಹಳ್ಳಿಯ ರಾಯನಗೌಡ, ಭರಮನಗೌಡ ಹುತಾತ್ಮರಾದರು.

ಬಳ್ಳಾರಿ ಜಿಲ್ಲೆಗೆ ನೇರವಾಗಿ ಸಂಬಂಧ ಪಡದ ಭೀಮರಾಯನಿಂದ ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿಯಂತೂ ಜಿಲ್ಲೆಯಲ್ಲಿ ಮೂಡಿ ಹಬ್ಬಿಕೊಂಡಿತು. ಇದರ ಪರಿಣಾಮವೂ ಜಿಲ್ಲೆಯಲ್ಲಿ ಹಸಿರಾಗಿ ಹಬ್ಬಿತು. ಭಾಷೆ, ಆಡಳಿತ, ಶಿಕ್ಷಣಗಳಂಥ ಸೌಲಭ್ಯಗಳಿರದಿದ್ದರಿಂದ ಜನರಲ್ಲಿ ಸ್ವಾತಂತ್ರ್ಯದ ಜಾಗೃತಿ ದೊಡ್ಡ ಪ್ರಮಾಣದಲ್ಲಿರಲಿಲ್ಲ. ಆದರೆ ಭೀಮರಾಯನ ಬಂಡಾಯ ಹೋರಾಟಕ್ಕೆ ಸ್ಫೂರ್ತಿಯ ಒಂದು ನೆಲೆಯಾಗಿ ಬಳ್ಳಾರಿ ರೂಪುಗೊಂಡಿತು. ವಿಶೇಷವೆಂದರೆ, ೧೮೫೭ರ ಪ್ರಥಮ ಸ್ವಾತಂತ್ರ್ಯ ಆಂದೋಲನಕ್ಕೂ, ೧೮೫೮ರ ನರಗುಂದ ಬಂಡಾಯಕ್ಕೂ, ೧೮೫೮ರ ಭೀಮರಾಯನ ಬಂಡಾಯಕ್ಕೂ ಅಂತರ ಸಂಬಂಧವಿದ್ದುದರಿಂದ ಬಳ್ಳಾರಿಯಲ್ಲಿ ಸ್ಫೂರ್ತಿ ಪ್ರೇರಣೆಗಳ ನೆಲೆ ರೂಪಗೊಂಡಿದ್ದು ಸಹಜವಾಗಿದೆ. ಭಾರತದೇಶದಲ್ಲಿ ನಡೆಯುತ್ತಿದ್ದ ಬಹುತೇಕ ಪ್ರಮುಖ ಘಟನೆಗಳನ್ನು ಬಳ್ಳಾರಿ ಗಂಭೀರವಾಗಿ ತೆಗೆದುಕೊಂಡಿತ್ತು.

* * *

ದೇಶದ ಸ್ವಾತಂತ್ರ್ಯ ಹೋರಾಟಕ್ಕೂ ಹೋರಾಟಗಾರರಿಗೆ ಸಂಘಟನಾತ್ಮಕ ಸ್ವರೂಪವಿರಲಿ ಎಂಬ ಉದ್ದೇಶದಿಂದಲೂ ಕಾಂಗ್ರೆಸ್ ಸಂಸ್ಥೆಯಾದುದು ಆಧುನಿಕ ಭಾರತದ ಮಹತ್ವದ ಘಟನೆಯಾಗಿದೆ. ಭಾರತ ರಾಷ್ಟ್ರೀಯ ಕಾಂಗ್ರೆಸ್ ೧೮೮೫ರಲ್ಲಿ ಸ್ಥಾಪನೆಯಾಯಿತು. ಮುಂಬಯಿಯಲ್ಲಿ ಪ್ರಥಮ ಅಧಿವೇಶನ ಡಿಸೆಂಬರ್ ೨೮ರಿಂದ ೩೦ ರವರೆಗೆ (೧೮೮೫) ಜರುಗಿತು. ಬಂಗಾಳದ ಉಮೇಶಚಂದ್ರ ಬ್ಯಾನರ್ಜಿ ಅಧಿವೇಶನದ ಅಧ್ಯಕ್ಷರಾಗಿದ್ದರು. ಅಖಂಡ ಭಾರತದಾದ್ಯಂತ ಎಪ್ಪತ್ತೆರಡು ಜನಪ್ರತಿನಿಧಿಗಳು ಭಾಗವಹಿಸಿದ್ದರು. ಈ

ಅಧಿವೇಶನದಲ್ಲಿ ಕನ್ನಡ ನಾಡಿನ ನಾಲ್ವರು ಪ್ರತಿನಿಧಿಗಳು ಭಾಗವಹಿಸಿದ್ದರು. ಅವರಲ್ಲಿ ಮೂವರು ಬಳ್ಳಾರಿಯವರು. ಕೋಲಾಚಲಂ ವೆಂಕಟರಾವ್, ಸಭಾಪತಿ ಮೊದಲಿಯಾರ್ ಮತ್ತು ಗುತ್ತಿ ಕೇಶವ ಪಿಳ್ಳೆ– ಆ ಮೂವರು. ಕೋಲಾಚಲಂ ವೆಂಕಟರಾವ್ ಸ್ಥಳೀಯ ಬಳ್ಳಾರಿಯವರಷ್ಟೇ ಅಲ್ಲದೇ ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸ ಪೂರೈಸಿ, ತಮ್ಮ ಸಾರ್ವಜನಿಕ ಸೇವಾ ಕಾರ್ಯಗಳಿಂದ, ವಕೀಲಿ ವೃತ್ತಿಯಿಂದ ಹೆಸರು ಮಾಡಿ ಮದ್ರಾಸ್ ಪ್ರಾವೆನ್ಸಿಯಲ್ಲಿ ಪ್ರಭಾವಿಗಳೆನಿಸಿದ್ದರು. ಪ್ರಥಮ ಅಧಿವೇಶನದಲ್ಲಿ ಭಾಗವಹಿಸಿದ್ದ ಬಾಲಗಂಗಾಧರ ತಿಲಕರೊಂದಿಗೆ ಆಪ್ತರಾಗಿದ್ದು ಪತ್ರ ಸಂಪರ್ಕದಲ್ಲಿದ್ದರು. ದೇಶದ ಬಗ್ಗೆ ಅಸಾಧಾರಣವಾದ ಪ್ರೇಮ ಹೊಂದಿದ್ದು ರಾಷ್ಟ್ರೀಯ ವ್ಯಕ್ತಿಗಳ ವ್ಯಕ್ತಿತ್ವದ ಪ್ರಭಾವದಿಂದ ವಿಧವಾ ವಿವಾಹ, ದಲಿತರ– ಅನಾಥರ ಬಾಳಿಗೆ ನೆರವಾಗಿದ್ದರು. ಕ್ರಾಂತಿಕಾರಕ ನಿಲುವುಗಳಿಂದ ಮುಖ್ಯವಾಹಿನಿಯಲ್ಲಿದ್ದರು. ಬಳ್ಳಾರಿ ಪರಿಸರದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಯುವಕರನ್ನು ಪ್ರೇರೇಪಿಸಲು ತಿಲಕರನ್ನು ಬಳ್ಳಾರಿಗೆ ಆಮಂತ್ರಿಸಿದ್ದರು. ೧೯೦೫ರಲ್ಲಿ ಕಿರಿಯ ಸಹೋದರ ಕೋಲಾಚಲಂ ಶ್ರೀನಿವಾಸರಾಯರು ನಿರ್ಮಿಸಿದ ಖಾಸಗಿ ರಂಗಮಂದಿರ "ಶ್ರೀ ಶಾರದಾ ವಿಲಾಸ ನಾಟಕ ಮಂದಿರ"ದ ಉದ್ಘಾಟನೆಯ ನೆಪದಲ್ಲಿ ಆಗಮಿಸಿ ಸಾರ್ವಜನಿಕ ಭಾಷಣಗಳನ್ನು ಮಾಡಲು ವ್ಯವಸ್ಥೆ ಮಾಡಿದ್ದರು. ೧೮೮೫ರಿಂದ ೧೯೧೫ರ ವರೆಗಿನ ಈ ಅವಧಿಯಲ್ಲಿ ಕೋಲಾಚಲಂ ವೆಂಕಟರಾವ್ ಸ್ವಾತಂತ್ರ್ಯ ಹೋರಾಟಗಾರರಾಗಿ ಬಳ್ಳಾರಿ ಪರಿಸರದಲ್ಲಿ ಪ್ರಭಾವಿಗಳಾಗಿದ್ದರು. ಮದನ ಮೋಹನ ಮಾಳವಿಯ, ಟಂಗುಟೂರಿ ಪ್ರಕಾಶಂ, ವೀರೇಶಲಿಂಗಂ ಪಂತುಲು, ದಾದಾಬಾಯಿ ನವರೋಜಿ, ಗೋಪಾಲಕೃಷ್ಣ ಗೋಖಲೆ ಮೊದಲಾದ ರಾಷ್ಟ್ರೀಯ ಸ್ಫೂರ್ತಿಯನ್ನುಂಟು ಮಾಡುವ ಪ್ರಭಾವಿಗಳೊಂದಿಗೆ ನಿಕಟವಾಗಿದ್ದುದು ಬಳ್ಳಾರಿಯು ಹೆಮ್ಮೆ ಪಡುತ್ತಿತ್ತು. ಇಂಥ ಹಿನ್ನೆಲೆಯಲ್ಲಿ ಬಾಲಗಂಗಾಧರ ತಿಲಕರನ್ನು ಬಳ್ಳಾರಿಗೆ ಕರೆಸಿದ್ದು ಉಚಿತ ವಾಗಿತ್ತು. "ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಿಂದ ನಮಗೆ ಬಹಳ ಲಾಭವಾಯಿತು. ನಾವು ಇದರಿಂದ ಪಾಠ ಕಲಿಯಬೇಕು" ಎಂದು ತಿಲಕರು ಕರೆ ನೀಡಿದ್ದರು. ಬಳ್ಳಾರಿ ಜಿಲ್ಲಾ ಕಲೆಕ್ಟರ್ ಆಗಿದ್ದ ರಾಬರ್ಟ್ ಸಿವೆಲ್ ಬರೆದಿದ್ದ The Forgotten Empire ಕೃತಿಯಿಂದ ಪ್ರೇರಿತವಾಗಿದ್ದ ಈ ಹೇಳಿಕೆಯ



ಉದ್ಘೋಷಣೆಯು ಸಹೋದರ ಕೋಲಾಚಲಂ ಶ್ರೀನಿವಾಸ ರಾಯರಿಗೆ ಪರಿಣಾಮ ಬೀರಿದ್ದರಿಂದ The Fall of Vijayanagar ಎಂಬ ಇಂಗ್ಲಿಷ್ ನಾಟಕ ರಚಿಸಿ (ಇದು ಕನ್ನಡದಲ್ಲಿ "ವಿಜಯನಗರ ಸಾಮ್ರಾಜ್ಯ ಪತನ" ಎಂದೂ, ತೆಲುಗಿನಲ್ಲಿ "ವಿಜಯನಗರ ಸಾಮ್ರಾಜ್ಯ ಪತನಮು" ಎಂದೂ ಅನುವಾದಿಸಿದ್ದರು) ರಾಷ್ಟ್ರೀಯತೆ ಮೂಡಿಸಲು ಆಂಶಿಕವಾದ ಕಾರ್ಯವನ್ನು ಮಾಡಿದ್ದರು.

**೧೯೨೦:** ದೇಶದಲ್ಲಿ ಬ್ರಿಟೀಶ್ ಆಳ್ವಿಕೆಯ ಕಾನೂನಾನ್ವಯ ತೀರ್ಮಾನ ಗಳು ಮತ್ತು ಕಾಂಗ್ರೆಸ್ ಅದಕ್ಕೆ ಪ್ರತಿಕ್ರಿಯೆಯಾಗಿ ತೆಗೆದುಕೊಂಡ ನಿರ್ಣಯಗಳು ಬಹುಮುಖಿ ಪರಿಣಾಮಗಳಿಗೆ ಕಾರಣವಾದ ಪ್ರಮುಖ ವರ್ಷ. ೧೯೧೯ರ ಫೆಬ್ರುವರಿ ರೌಲತ್ ಕಾಯಿದೆಯನ್ನು ಜಾರಿಗೊಳಿಸಿದ್ದರಿಂದ ಬ್ರಿಟೀಶ್ ಆಳ್ವಿಕೆ ಪೊಲೀಸರಿಗೆ ಅತಿಶಯವಾದ ಅಧಿಕಾರವನ್ನು ನೀಡಿತು. ಭಾರತೀಯರೇ ನೌಕರದಾರರೂ ಆಗಿದ್ದರಿಂದ ಪೊಲೀಸ್ ವಿಭಾಗವನ್ನು ಆರ್ಥಿಕ– ಸಾಮಾಜಿಕ ಸೌಲಭ್ಯಗಳನ್ನು ನೀಡುವುದರ ಮೂಲಕ ತನ್ನ ಅಧಿಕಾರದ ಹಿಡಿತಕ್ಕಾಗಿ ಒಂದು ತಂತ್ರಗಾರಿಕೆಯನ್ನೇ ರೂಪಿಸಿತ್ತು. ರೌಲತ್ ಕಾಯಿದೆಯ ಅನುಬಂಧದಂತೆ ಜರುಗಿದ ಜಲಿಯನ್ ವಾಲಾಬಾಗ್ ಹತ್ಯೆ, ಖಿಲಾಫತ್ ಚಳುವಳಿ, ಮಾಪಿಳ್ಳಾ ದಂಗೆ ಮೊದಲಾದವುಗಳು ಭಾರತೀಯರಲ್ಲಿ ರಾಷ್ಟ್ರೀಯ ಸ್ಫೂರ್ತಿಯ ಕೆಚ್ಚನ್ನುಂಟು ಮಾಡಿದವು. ಇದೇ ಸಂದರ್ಭದಲ್ಲಿ ಗಾಂಧೀಜಿ ಪೂರ್ಣಪ್ರಮಾಣದಲ್ಲಿ ತಮ್ಮನ್ನು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಂಡರು. ೧೯೨೦ರಲ್ಲಿ ನಡೆದ ಮುಂಬಯಿ, ಕಲ್ಕತ್ತಾ, ನಾಗಪುರಗಳ ಕಾಂಗ್ರೆಸ್ ವಾರ್ಷಿಕ ಅಧಿವೇಶನಗಳಲ್ಲಿ ಬ್ರಿಟೀಶ್ ಆಡಳಿತ ವ್ಯವಸ್ಥೆಯ ಅಪಾಯಕಾರಿ ತಂತ್ರಗಳನ್ನು ವಿರೋಧಿಸುವುದು ಮತ್ತು ಸಾಮಾಜಿಕ ಜಾಗೃತಿ ಸ್ವಾತಂತ್ರ್ಯ ಹೋರಾಟಗಳನ್ನು ತೀವ್ರಗೊಳಿಸುವುದು, ಸಂಘಟನೆಯನ್ನು ವಿಕೇಂದ್ರಿಕರಿಸುವುದು–ಈ ಅಧಿವೇಶನಗಳಲ್ಲಿ ನಿರ್ಣಯವಾದವು. ನೇರವಾಗಿ ಬಳ್ಳಾರಿಗೆ ಸಂಬಂಧಿಸಿದ ವಿಚಾರವೆಂದರೆ, ಕಾಂಗ್ರೆಸ್ ಸಂಸ್ಥೆಯ ಸಂಘಟನಾತ್ಮಕ ಚಟುವಟಿಕೆಗಳನ್ನು ರಚನಾತ್ಮಕಗೊಳಿಸಲು ಭಾಷಾಧಾರಿತ ಪ್ರಾಂತೀಯ ಜಿಲ್ಲಾ, ತಾಲೂಕು ಸಮಿತಿಗಳನ್ನು ರಚಿಸಬೇಕೆಂಬುದು ಒಂದು ನಿರ್ಣಯ.

೧೯೨೦ರಲ್ಲಿಯೇ ತೀವ್ರಗೊಂಡ ಅಸಹಕಾರ ಚಳುವಳಿಯ ಉದ್ದೇಶಕ್ಕನುಗುಣವಾಗಿ ಬಳ್ಳಾರಿ ಸ್ಪಂದಿಸಿತು. ವಿದ್ಯಾರ್ಥಿಗಳು ಶಾಲಾ–ಕಾಲೇಜುಗಳನ್ನು ತೊರೆಯುವುದು; ವಕೀಲರು ತಮ್ಮ ವೃತ್ತಿಯನ್ನು ತ್ಯಜಿಸುವುದು; ಕೌನ್ಸಿಲ್ ಚುನಾವಣೆಗಳನ್ನು ಬಹಿಷ್ಕರಿಸುವುದು ಮತ್ತು ಬಿರುದು–ಪ್ರಶಸ್ತಿಗಳನ್ನು ಹಿಂದಿರುಗಿಸುವ ಹೊಸದಾಗಿ ಪಡೆಯುವ ಯೋಜನೆ ರೂಪಿಸುವುದು; ಸಾವಿರಾರು ವಿದ್ಯಾರ್ಥಿಗಳು, ಯುವಕರು ಸಾಮಾನ್ಯರು ಚಳುವಳಿಗೆ ತೀವ್ರವಾಗಿ ಸ್ಪಂದಿಸಿದರು. ಕಲ್ಲೂರು ಸುಬ್ಬರಾವ್, ವೆಂಕಟ ರಮಣಾಚಾರ್ಯ, ನೇತ್ರಹಳ್ಳಿ ಸಂಜೀವರಾಯ, ಬಾದನಹಟ್ಟಿ ವೆಂಕೋಬರಾಯ, ಟೇಕೂರು ನಾರಾಯಣ ಶಾಸ್ತ್ರಿ, ಲ್ಯಾಂಗ್ಲಿ ಭೀಮಸೇನ ರಾಯ ಮೊದಲಾದವರು ಮುಖ್ಯವಾಹಿನಿಯಲ್ಲಿ ಮಾರ್ಗದರ್ಶನ ಮಾಡಿದರು. ಭಾಷಾಧಾರಿತ ಕಾಂಗ್ರೆಸ್ ಸಮಿತಿ ರಚಿಸುವ ವಿಚಾರದಲ್ಲಿ ಕನ್ನಡಿಗರು–ತೆಲುಗರು ಬಳ್ಳಾರಿಯನ್ನು ಸೇರಿದಂತೆ ಒಡೆಯುವ ಸಂದರ್ಭ ಉದ್ಭವಿಸಿತು. ತೆಲುಗರ ಅವೈಜ್ಞಾನಿಕ ಚಿಂತನೆ, ಅನಗತ್ಯ ಉಪಾಧ್ಯಾಪಿತನ ಪರಿಸರವನ್ನೇ ಉದ್ವಿಗ್ನಗೊಳಿಸಿತ್ತು. ಸಮಾಧಾನದಿಂದ ಉದ್ದೇಶವರಿತು ಕಾರ್ಯೋನ್ಮುಖಗೊಳ್ಳಬೇಕಾದ ವಿಷಯವು ಗೊಂದಲದ ಗೂಡಾಗಿಸಿತ್ತು. ಪರಿಣಾಮವಾಗಿ ಬಳ್ಳಾರಿ ಜಿಲ್ಲೆಯಲ್ಲಿ ಕನ್ನಡಪರ ಕಾಂಗ್ರೆಸ್ ಸಮಿತಿ ಮತ್ತು ತೆಲುಗು ಪರ ಕಾಂಗ್ರೆಸ್ ಸಮಿತಿ ಎಂದು ಎರಡು ಸಮಿತಿಗಳು ಅನಗತ್ಯ ಭಿನ್ನಾಭಿಪ್ರಾಯಗಳಿಂದ ರಚನೆಯಾದವು. ಇದರಲ್ಲಿ ಭಾಷೆ, ನಾಡು ಎಂಬ ಭಾವನಾತ್ಮಕ ವಿಚಾರಗಳೂ ಸೇರಿಕೊಂಡಿದ್ದರಿಂದ ಸ್ವಾತಂತ್ರ್ಯ ಹೋರಾಟದ ಉತ್ಸಾಹ ಕುಂಠಿತಗೊಳ್ಳಬಹುದಾದ ಉಲ್ಬಣಸ್ಥಿತಿಗೆ ತಲುಪಿತು. ಅಂಥ ದುರಾದೃಷ್ಟಕರ ಸಂದರ್ಭಕ್ಕೆ ಬಳ್ಳಾರಿ ಸಾಕ್ಷಿಯಾಯಿತು. ದೇಶದಾದ್ಯಂತ ಅಸಹಕಾರ ಚಳುವಳಿಯ ಮಹತ್ವವನ್ನು, ಸ್ವಾತಂತ್ರ್ಯ ಮನೋಧರ್ಮದ ಜನಜಾಗೃತಿಯನ್ನು ಉಂಟು ಮಾಡಲು ಗಾಂಧೀಜಿ ದಕ್ಷಿಣ ಭಾರತ ಪ್ರವಾಸ ಕೈಕೊಂಡರು. ಆಂಧ್ರಪ್ರದೇಶದ ಮೂಲಕ ಬಳ್ಳಾರಿಗೂ ಬಂದರು. ಬಹುಶಃ ಜಿಲ್ಲೆಯಾದ್ಯಂತ ಪ್ರವಾಸ ಮಾಡುವ ಯೋಜನೆಯಿದ್ದಿರಬಹುದು. ಆದರೆ ಬಳ್ಳಾರಿಯಲ್ಲಿ ಭಾಷಾಧಾರಿತವಾದ ಕಾಂಗ್ರೆಸ್‌ನ ಎರಡು ಸಮಿತಿಗಳು ಗಾಂಧೀಜಿಯವರನ್ನು ಅಲಕ್ಷ್ಯ ಮಾಡಿದವು. ಅಕ್ಟೋಬರ್ ೧, ೧೯೨೧ರಂದು ಬಳ್ಳಾರಿಗೆ ಬಂದಿಳಿದ ಗಾಂಧೀಜಿ ಧರ್ಮಾವರಂ ರಾಮಕೃಷ್ಣಮಾಚಾರ್ಯರ "ಬಂಗಲಾ ಕೌಂಪೌಂಡ್"ನಲ್ಲಿ ಸಾರ್ವಜನಿಕ ಭಾಷಣ ಮಾಡಿದರು. ಸೌಹಾರ್ದಯುತ ವಾತಾವರಣವಿರಲಿಲ್ಲ. ಆತಿಥ್ಯ ಲಭ್ಯವಾಗದಿದ್ದರಿಂದ ಅವರು ಬಳ್ಳಾರಿ ರೇಲ್ವೆ ನಿಲ್ದಾಣದಲ್ಲಿ ರಾತ್ರಿ ಕಳೆಯಬೇಕಾಯಿತು. ಬಳ್ಳಾರಿಯಂಥ ಸಂಕೀರ್ಣ ಪರಿಸರದ ಜಿಲ್ಲೆಯಲ್ಲಿ ರಾಷ್ಟ್ರೀಯ ಮನೋಧರ್ಮಕ್ಕೆ ಧಕ್ಕೆಯುಂಟಾಗಬಾರದು ಇದು ಪರಿಹಾರ ಕಾಣಬೇಕೆಂದು ಎನ್.ಸಿ. ಕೇಳ್ಕರ್ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿತು. "ಲೋಕಮಾನ್ಯ" ಬಾಲಗಂಗಾಧರ ತಿಲಕರು ಬಳ್ಳಾರಿಯ ಬಗ್ಗೆ ವಿಶೇಷ ಕುತೂಹಲ, ಆಸಕ್ತಿ ಹೊಂದಿದ್ದರಿಂದ ತಮ್ಮ "ಬಲಗೈ ಬಂಟ" ಎನ್.ಸಿ. ಕೇಳ್ಕರ್ ನೇತೃತ್ವದಲ್ಲಿ ರಾಷ್ಟ್ರೀಯ ಹೊಣೆಗಾರಿಕೆಯನ್ನು ಗಮನದಲ್ಲಿರಿಸಿ ಸಮಿತಿ ರಚಿಸಿ ಅಧ್ಯಯನ ಮಾಡಿ ವರದಿ ನೀಡಲು ಕೇಳಲಾಯಿತು. ಈ ವರದಿಯಾದರೂ ಸ್ವಾತಂತ್ರ್ಯ ಹೋರಾಟದ ಉತ್ಸಾಹಕ್ಕೆ ಪರಿಹಾರ ಒದಗಿಸಿತಾದರೂ ಭಾಷಾ ಸಮಸ್ಯೆಯನ್ನುಂಟು ಮಾಡಿತು. ಅಖಂಡ ಬಳ್ಳಾರಿ ಜಿಲ್ಲೆಯನ್ನು ಪೂರ್ವ ಮತ್ತು ಪಶ್ಚಿಮ ತಾಲೂಕುಗಳೆಂದು ಅವುಗಳನ್ನು ಕನ್ನಡಪರ–ತೆಲುಗುಪರ ಕಾಂಗ್ರೆಸ್ ಸಮಿತಿಗೆ ಹಂಚಲಾಯಿತು. ಇದು ಅಖಂಡ ಬಳ್ಳಾರಿ ಜಿಲ್ಲೆಯನ್ನು ಭಾಷಾವಾರು ಪ್ರಾಂತ ರಚನೆಯ ಸಂದರ್ಭದಲ್ಲಿ ತುಂಡು ಮಾಡಲು ಕಾರಣವೂ ಆಯಿತು.



* * *

**೧೯೨೪:** ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ. ಬಳ್ಳಾರಿ ಪರಿಸರದಲ್ಲಿ ೧೯೨೧ರಿಂದ ಗಾಂಧೀಜಿಯವರ ನೇರ ಪ್ರಭಾವವಾಗಿ ಉತ್ಸಾಹ ಅಭಿಮಾನಗಳು ಹಸಿಯಾಗಿದ್ದುದಕ್ಕೂ ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿದ್ದಕ್ಕೂ, ಅಧಿವೇಶನ ಪ್ರಮುಖ ವೇದಿಕೆ, ಮಾರ್ಗ, ಬಾವಿಗಳಿಗೆ ವಿಜಯನಗರ ಸಾಮ್ರಾಜ್ಯದ ಪಾರಂಪರಿಕ ಮೌಲ್ಯ ಸಾರುವ ಶ್ರೀ ವಿರೂಪಾಕ್ಷ ವೇದಿಕೆ, ಶ್ರೀ ಕೃಷ್ಣದೇವರಾಯ, ಹಕ್ಕ–ಬುಕ್ಕ, ಪಂಪಾ ಸರೋವರ–ಗಳನ್ನು ನಾಮಕರಣ ಮಾಡಿದ್ದಕ್ಕೂ ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರಿಗೆ ಅಧಿವೇಶನದಲ್ಲಿ ಉತ್ಸಾಹದಿಂದ ಭಾಗವಹಿಸಲು ಪ್ರೇರಣೆಯಾದುದಕ್ಕೂ ಪ್ರಜ್ಞಾಪೂರ್ವಕ ಸಂಬಂಧವಿತ್ತು. ಟಿ.ಬಿ. ಕೇಶವರಾವ್, ಟಿ.ಬಿ. ಜಯಲಕ್ಷ್ಮಿ ಬಾಯಿ, ಶಂಕರಶಾಸ್ತ್ರಿ, ಶೆಟ್ರು ಚೂಡಪ್ಪ, ವಸುಪಾಲಪ್ಪ ಇಜಾರಿ, ಮುದೇನೂರ ಕೊಟ್ರಬಸಪ್ಪ, ದಂಡಿನ ರಾಮರಾಯ, ಬಾದನಹಟ್ಟಿ ವೆಂಕೋಬರಾವ್, ಬೂದಿಹಾಳ ಅನಂತರಂಗಾಚಾರ, ಬೆಲ್ಲದ ಚೆನ್ನಪ್ಪ, ಪತ್ತಿಕೊಂಡ ಗುರುನಾಥಪ್ಪ

ಗಣಪತಪ್ಪ, ಮತ್ತಿಹಳ್ಳಿ ರಾಘವೇಂದ್ರರಾವ್, ಸಂಡೂರು ವೆಂಕಟಭೀಮಾಚಾರ್ಯ, ತಟ್ಟಿ ಕೃಷ್ಣರಾವ್, ಟೇಕೂರ ಸುಬ್ರಹ್ಮಣ್ಯ, ಅಸುಂಡಿ ತಿರುಮಲರಾವ್, ಭಾಗವಹಿಸಿ ಅಧಿವೇಶನದ ನಿರ್ಣಯಗಳನ್ನು ಸುದ್ದಿ ಮಾಡಿ ಜಾಗೃತಿಯನ್ನುಂಟು ಮಾಡಿದರು.

**೧೯೩೦:** ೧೯೩೦ ಜನವರಿ ೨೬ ರಂದು ಲಾಹೋರಿನಲ್ಲಿ ನಡೆದ ಜವಾಹರಲಾಲ್ ನೆಹರೂ ಅಧ್ಯಕ್ಷತೆಯ ಕಾಂಗ್ರೆಸ್ ಅಧಿವೇಶನದಲ್ಲಿ ದೇಶವು ಸಂಪೂರ್ಣ ಸ್ವಾತಂತ್ರ್ಯಗೊಳ್ಳಬೇಕೆಂಬ ನಿರ್ಣಯವನ್ನು ಕೈಗೊಂಡಿತು. ಉತ್ಸಾಹ–ಒತ್ತಾಯಕ್ಕಿದ್ದ ಶಕ್ತಿಯೆಂದರೆ, ೨೬ರ ಜನವರಿ ೧೯೩೦ರಂದು ಈ ನಿರ್ಣಯ ಕೈಗೊಂಡಿದ್ದಕ್ಕೆ ದೇಶ "ಸ್ವಾತಂತ್ರ್ಯ ದಿನ"ವನ್ನಾಗಿ ಆಚರಿಸಿತು. ಬಳ್ಳಾರಿಯು ಇದನ್ನು "ಸ್ವಾತಂತ್ರ್ಯ ದಿನಾಚರಣೆ" ಎಂಬಂತೆಯೇ ಆಚರಿಸಿತ್ತು. ಬಳ್ಳಾರಿ ಪರಿಸರದಲ್ಲಿ ದೇಶದ ಬಗ್ಗೆ ಅಭಿಮಾನ, ಸ್ವಾತಂತ್ರ್ಯದ ಬಗ್ಗೆ ತಿಳುವಳಿಕೆ ಸ್ಪಷ್ಟಗೊಳ್ಳುತ್ತ ಬಂದಿತು. ದೇಶದ ಪ್ರಮುಖ ವಿದ್ಯಮಾನವಾದ ಈ ವಿಚಾರವೇ ೧೯೪೨ರ "ಮಾಡು ಇಲ್ಲವೇ ಮಡಿ" ಘೋಷಣೆಯ "ಬ್ರಿಟೀಶರೇ ಭಾರತ ಬಿಟ್ಟು ತೊಲಗಿರಿ" ನಿರ್ಣಾಯಕ ಚಳುವಳಿಗೆ ನಾಂದಿಯಾಯಿತು.

೧೯೩೦ರ ಮಾರ್ಚ್ ೧೨ ರಂದು ಕಾನೂನು ಭಂಗ ಚಳುವಳಿಗೆ ಗಾಂಧೀಜಿ ಬಳಸಿದ ಪ್ರಬಲ, ಪರಿಣಾಮಕಾರಿ ಮತ್ತು ಅಹಿಂಸಾತ್ಮಕ ಅಸ್ತ್ರ "ಉಪ್ಪಿನ ಸತ್ಯಾಗ್ರಹ". ಸಾಬರಮತಿ ಆಶ್ರಮದಿಂದ ಸಮುದ್ರ ದಂಡೆಯ "ದಂಡಿ"ಯವರೆಗೆ ನಡೆದ ಉಪ್ಪಿನ ಕಾಯಿದೆ ಮುರಿಯುವ ಈ ಸಂದೇಶವು ಬ್ರಿಟೀಶರಿಗೆ ಒಂದು ಶಾಪದಂತೆ ಕಂಡಿತು!

ಕಾನೂನುಭಂಗ (ಸವಿನಯ ಚಳುವಳಿ) ಚಳುವಳಿ ಅಹಿಂಸಾತ್ಮಕವಾಗಿದ್ದು ಬ್ರಿಟೀಶರಿಗೆ ಶಾಪವಾಗಿ ಪರಿಣಮಿಸಿದ್ದುದಕ್ಕೆ ಮುಖ್ಯ ಕಾರಣವೆಂದರೆ ಅವರ ಕೈಯಲ್ಲಿದ್ದ ಲಾಠಿಗೆ ಕೆಲಸ ನೀಡದಿರುವುದರಿಂದ. ಅದಕ್ಕೆ ಸರಿಸಮವಾಗಿ ಭಾರತೀಯರಿಗೆ ಪ್ರಭಾವವನ್ನುಂಟು ಮಾಡಿದ್ದರಿಂದ ಪೂರ್ಣ ಪ್ರಮಾಣದಲ್ಲಿ ಸ್ಪಂದಿಸಿದ್ದರು. ಬಳ್ಳಾರಿಯೂ ಸೇರಿದಂತೆ ಜಿಲ್ಲೆಯಾದ್ಯಂತ ಈ ಚಳುವಳಿಯು ಯಥಾವತ್ತಾಗಿ ಪಾಲಿಸಿತು. ಒಂದರ್ಥದಲ್ಲಿ ಕಾನೂನು ಭಂಗ ಚಳುವಳಿಯು ಬಳ್ಳಾರಿಯಲ್ಲಿ ವ್ಯಾಪಕವಾದ ನೆಲೆಯನ್ನು ಪಡೆಯಿತು. ಈ ಸಂಬಂಧವಾಗಿ ಫೆಬ್ರವರಿ ೨೩, ೧೯೩೦ರಲ್ಲಿ ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿ ಸಭೆ ಸೇರಿತು. ಕರ್ನಾಡು ಸದಾಶಿವರಾಯ, ರಂಗನಾಥ ಆರ್. ದಿವಾಕರ, ಕೌಜಲಗಿ ಹನುಮಂತರಾಯ, ಗಂಗಾಧರ ರಾವ್ ದೇಶಪಾಂಡೆ, ನಾ.ಸು.ಹರ್ಡೀಕರ ಮೊದಲಾದ ರಾಜ್ಯ ಮತ್ತು ಭಾಗಶಃ ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡಿದ್ದ ಗಣ್ಯರು ಈ ಸಭೆಯಲ್ಲಿ ಭಾಗವಹಿಸಿದರು. ಈ ಸಭೆ ಕನ್ನಡಪರ ಚಿಂತಕರಿಗೆ, ಹೋರಾಟಗಾರರಿಗೆ ಭರವಸೆ ಮತ್ತು ಆತ್ಮವಿಶ್ವಾಸ ಮೂಡಿ ಏಕೀಕರಣ ಸಂದರ್ಭದ ದಿಕ್ಸೂಚಿ ನೆಲೆಗೆ ಮಾರ್ಗದರ್ಶಕವೂ ಆಯಿತು. ಈ ಚಳುವಳಿಯ ಮುಂದುವರಿಕೆಗಾಗಿ ಇಜಾರಿ ವಸುಪಾಲಪ್ಪ, ಟೇಕೂರ ಸುಬ್ರಹ್ಮಣ್ಯ, ವಿ.ಎಂ.ಗಿರಿ ಮತ್ತು ಮತ್ತಿಹಳ್ಳಿ ರಾಘವೇಂದ್ರರಾವ್ ಸಮಿತಿ ಸಿದ್ಧವಾಡಿಕೊಂಡು ಕಾರ್ಯೋನ್ಮುಖರಾಗಿದ್ದರು. ಸಹಾಯಕರಾಗಿ ಬೆಲ್ಲೋಣಿ ಭೀಮರಾವ್, ಕನಕಮರಂ ಗುರುರಾಜರಾವ್, ಡಿ.ಎಸ್.ಹನುಮಂತರಾವ್, ತಟ್ಟಿ ಕೃಷ್ಣರಾವ್ ಕಾರ್ಯನಿರ್ವಹಿಸಿದರು. ಚಳುವಳಿಯ ಅನುಬಂಧದಲ್ಲಿ ಸತ್ಯಾಗ್ರಹಾಶ್ರಮ, ಹೆಂಡದ ಅಂಗಡಿಗಳ ಮುಂದೆ ಪಿಕೆಟಿಂಗ್, ವಾರ್ಷಿಕ ಲೀಲಾವು ವಿರೋಧ, ಕಾರಾಗ್ರಹ ವಾಸ, ಆಸ್ತಿ ಜಪ್ತಿ, ಗಡೀಪಾರು ಶಿಕ್ಷೆ ಮೊದಲಾದ ಘಟನೆಗಳು ಜರುಗಿದವು.



೧೯೨೦ರ ಅಸಹಕಾರ ಚಳುವಳಿ, ೧೯೨೪ರಲ್ಲಿ ನಡೆದ ೩೯ನೇ ಕಾಂಗ್ರೆಸ್ ಅಧಿವೇಶನ–ಬೆಳಗಾವಿಯ ಈ ಅಧಿವೇಶನದಲ್ಲಿ ಮಹಾತ್ಮ ಗಾಂಧೀಜಿಯವರ ಅಧ್ಯಕ್ಷತೆ, ೧೯೩೦ರ ಸವಿನಯ ಕಾಯಿದೆ ಭಂಗ ಚಳುವಳಿ. ೧೯೩೦ ರಲ್ಲಿಯೇ ನಡೆದ ಲಾಹೋರಿನ ಕಾಂಗ್ರೆಸ್ ಅಧಿವೇಶನದಲ್ಲಿ ೨೬ ಜನವರಿ ದಿನವನ್ನು "ಸ್ವಾತಂತ್ರ್ಯ ದಿನ"ವಾಗಿ ಭಾವಿಸಲು ಕೂಗಿದ ಘೋಷಣೆ, ೧೯೩೦ ರಲ್ಲಿಯೆ ಮಹಾತ್ಮ ಗಾಂಧೀಜಿ ಕರೆ ನೀಡಿದ ಕಾನೂನು ಭಂಗ ಚಳುವಳಿ, ಉಪ್ಪಿನ ಸತ್ಯಾಗ್ರಹ–ಹೀಗೆ ಇಂಥ ಹಲವು ರಾಷ್ಟ್ರೀಯ ವಿದ್ಯಮಾನಗಳಿಗೆ ಬಳ್ಳಾರಿ ನೇರವಾಗಿ ಸ್ಪಂದಿಸಿತ್ತು. ಅಷ್ಟೇ ಅಲ್ಲದೇ ತನ್ನದೇ ಆದ ಸೃಜನಶೀಲ ಚಿಂತನೆಯಿಂದ ಮತ್ತಷ್ಟು ಅರ್ಥಪೂರ್ಣಗೊಳಿಸಲು ಜನಪರ ಹಾಗೂ ಸಮಾಜಮುಖಿ ಯೋಜನೆಗಳನ್ನು ರೂಪಿಸುತ್ತಿತ್ತು. ಇದು ಬಳ್ಳಾರಿ ನಾಯಕರ ಯೋಜನಾಬದ್ಧ ಕಾರ್ಯಸೂಚಿಯು ಆಗಿದ್ದರಿಂದ ಸಹಜವಾಗಿ ರಾಜ್ಯದ ಸ್ವಾತಂತ್ರ್ಯ ಹೋರಾಟಗಾರರ ಗಮನವನ್ನೂ ಇದು ಸೆಳೆದಿತ್ತು. ೧೯೩೦ರ ಮಾರ್ಚ್ ೧೨ ರಂದು ಮಹಾತ್ಮ ಗಾಂಧೀಜಿಯವರು ಕಾನೂನು ಭಂಗ ಚಳುವಳಿಯ ಒಂದು ಭಾಗವಾಗಿ "ಉಪ್ಪಿನ ಸತ್ಯಾಗ್ರಹ"ವನ್ನು ಘೋಷಿಸಿದರು. ಉಪ್ಪಿನ

ಕಾಯಿದೆಯನ್ನು ಮುರಿಯುವುದರ ಮೂಲಕ ಬ್ರಿಟೀಶರ ವಿರುದ್ಧದ ತಮ್ಮ ನಿಲುವನ್ನು ವ್ಯಕ್ತಪಡಿಸಿ ದೇಶದ ಪ್ರತಿಯೊಬ್ಬರಿಗೂ ಈ ಚಳುವಳಿಯ ಮಹತ್ವವನ್ನು, ಅವಶ್ಯಕತೆಯನ್ನು, ಕರ್ತವ್ಯವನ್ನು ಸಾರುವುದು ಮುಖ್ಯ ಉದ್ದೇಶವಾಗಿತ್ತು. ಉಪ್ಪಿನ ಮೇಲೆ ತೆರಿಗೆ ವಿಧಿಸಿದ ಬ್ರಿಟೀಶರ ಆಳ್ವಿಕೆಯ ಕಾನೂನು ನೀತಿಯನ್ನು ದೇಶದ ಮುಂದೆ ಪ್ರಸ್ತಾಪ ಮಾಡುವುದರ ಮೂಲಕ ದೇಶದ ಸಮಗ್ರ ಜನತೆಗೆ ಬ್ರಿಟೀಶ್ ಆಳ್ವಿಕೆಯ ಜನವಿರೋಧಿ ನೀತಿಯನ್ನು ಈ ಮೂಲಕ ಸಾರಿದಂತಾಗಿತ್ತು. ಮಾರ್ಚ್ ೧೨ರಿಂದ ಏಪ್ರಿಲ್ ೬ ವರೆಗೆ ನಡೆದ ಅಂದರೆ ಸಾಬರಮತಿಯಿಂದ ಸಮುದ್ರ ದಂಡೆಯ "ದಂಡಿ" ಎಂಬ ಸ್ಥಳದವರೆಗೆ ನಡೆದ ಈ ಕಾರ್ಯಕ್ರಮವು ಅಹಿಂಸಾತ್ಮಕ ಚಳುವಳಿಯೂ ಆಗಿತ್ತು. ಸ್ವಾತಂತ್ರ್ಯ ಚಳುವಳಿಗೆ ತೀಕ್ಷ್ಣತೆಯನ್ನು ಮತ್ತು ವ್ಯಾಪಕತೆಯನ್ನು ಈ ಚಳುವಳಿ ತಂದು ಕೊಟ್ಟಿತ್ತು.

ದೂರದಲ್ಲಿ ನಡೆದಿದ್ದ ಈ ಚಳುವಳಿಗೆ ಬಳ್ಳಾರಿಯು ಅರ್ಥಪೂರ್ಣವಾಗಿಯೇ ಸ್ಪಂದಿಸಿತ್ತು. ಇದನ್ನು ಗಮನಿಸಿದ್ದ ಕರ್ನಾಟಕ ರಾಜ್ಯದ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಪ್ರಮುಖ ನಾಯಕರು ಬಳ್ಳಾರಿಯಲ್ಲಿ ಕರ್ನಾಟಕ ಪ್ರದೇಶ ಸಮಿತಿ ಸಭೆ ನಡೆಸಲು ತೀರ್ಮಾನಿಸಿದ್ದು ವಿಶೇಷವಾಗಿತ್ತು.

ಬಳ್ಳಾರಿ ಜಿಲ್ಲೆಯ ಕಲೆಕ್ಟರ್ ಆಳ್ವಿಕೆಯು ಹೆಂಡದಂಗಡಿಗಳ ಲಿಲಾವು ದಿನಾಂಕವನ್ನು ಆಗಸ್ಟ್ ೩೦ಕ್ಕೆ ನಿಗದಿ ಪಡಿಸಿತು. ಇದನ್ನು ಸ್ವಾತಂತ್ರ್ಯ ಹೋರಾಟದ ಒಂದು ಭಾಗವೆಂದೇ ಪರಿಭಾವಿಸಿದ ಜಿಲ್ಲಾ ಹೋರಾಟಗಾರರು ಮತ್ತು ಸ್ಥಳೀಯ ಬಳ್ಳಾರಿ ನಾಯಕರು ತಮ್ಮ ಅಭಿಮಾನದ ವಿಚಾರವೆಂದೇ ಭಾವಿಸಿದರು. ಹೀಗಾಗಿ ಬಳ್ಳಾರಿಯಲ್ಲಿ ಹೆಂಡದಂಗಡಿಗಳ ಲಿಲಾವನ್ನು ಪ್ರತಿಭಟಿಸಿದ ಹೋರಾಟಗಾರರೊಂದಿಗೆ ಸಾರ್ವಜನಿಕರೂ ಸೇರಿಕೊಂಡರು. ಚಳುವಳಿಗಾರರು ಕಾನೂನನ್ನು ಹೇಗೆ ಉಲ್ಲಂಘಿಸಿದರು ಎಂಬುದನ್ನು ಬಿ.ವಿ. ಶೇಷಗಿರಿರಾವ್‌ರ ಮಾತುಗಳಲ್ಲಿ ನೋಡಬಹುದು. ಈ ದಾಖಲೆ ಅಂದಿನ ಪರಿಸ್ಥಿತಿ ಹೇಗಿತ್ತು ಎಂಬುದನ್ನು ಯಥಾವತ್ತಾಗಿ ವಿವರಿಸುತ್ತದೆ. ಚಾರಿತ್ರಿಕ ಕಾರಣಕ್ಕಾಗಿ ಅದರ ಪೂರ್ಣಪಾಠವನ್ನು ಗಮನಿಸ ಬಹುದು.

"ಆಗಸ್ಟ್ ೩೦, ೧೯೩೦ರಂದು ನಡೆಯಬೇಕಾಗಿದ್ದ ಹೆಂಡದಂಗಡಿಗಳ ಲಿಲಾವನ್ನು ಹೇಗೆ ತಡೆಯಬೇಕು ಎಂಬುದನ್ನು ನಿರ್ಧರಿಸಲು ಅದೇ ದಿನ ಮುಂಜಾನೆ ಟೇಕೂರ ಸುಬ್ರಹ್ಮಣ್ಯಂ ಅವರ ಮನೆಯಲ್ಲಿ ನಾವೆಲ್ಲಾ ಸಭೆ



ಸೇರಿದೆವು. ಅನೇಕ ಕಾರ್ಯತಂತ್ರಗಳ ಬಗ್ಗೆ ಚರ್ಚೆ ನಡೆಯಿತು. ಹರಾಜಿನ ಸಂದರ್ಭದಲ್ಲಿ ಯಾವುದೇ ಅಹಿತಕಾರಿ ಘಟನೆ ನಡೆಯದಂತೆ ತಡೆಗಟ್ಟಲು ತಾಲೂಕು ಕಛೇರಿ ಸುತ್ತಲೂ ಪೊಲೀಸರ ಸರ್ಪಗಾವಲು ಹಾಕಲಾಗಿತ್ತು. ಜನಗಳ ಜಾತ್ರೆಯೇ ಅಲ್ಲಿ ನೆರೆದಿತ್ತು. ಚಳುವಳಿ ಹೇಗೆ ನಡೆಯುತ್ತದೆ ಎಂಬದನ್ನು ನೋಡಲು ಕುತೂಹಲಿಗಳಾದ ಸಾರ್ವಜನಿಕರು ರಸ್ತೆ ಬದಿಯ ಮರಗಳ ಮೇಲೆಲ್ಲಾ ಕುಳಿತು ವೀಕ್ಷಿಸುತ್ತಿದ್ದರು. ಪ್ರತಿಭಟನೆ ನಡೆಸಲು ನಾವು ಕಳುಹಿಸಿದ ಸ್ವಯಂ ಸೇವಕರ ಮೊದಲ ತಂಡ ಕಛೇರಿ ತಲುಪುವ ಮೊದಲೆ ಬಂಧನಕ್ಕೊಳಗಾಯಿತು. ಮತ್ತೊಂದು ತಂಡವೂ ಕಛೇರಿ ತಲುಪುವುದರಲ್ಲಿ ವಿಫಲವಾಯಿತು. ಸ್ತ್ರೀಯರಂತೆ ವೇಷ ಮರೆಸಿಕೊಂಡು ಜಟಕಾದಲ್ಲಿ ಸ್ವಯಂ ಸೇವಕರನ್ನು ಕಳುಹಿಸಬೇಕೆಂಬ ತಂತ್ರವೂ ಫಲಿಸಲಿಲ್ಲ. ಒಟ್ಟಿನಲ್ಲಿ ನಮಗೆ ಸೋಲುಂಟಾಗುವ ಸಂಭವವಿತ್ತು. ನಾವೆಲ್ಲ ಬಂಧನಕ್ಕೊಳಗಾಗಲು ಸಿದ್ಧರಿದ್ದೆವು. ನನ್ನ ಹೆಂಡತಿ ಗರ್ಭಿಣಿಯಿದ್ದಳು. ಆದರೂ ನಾನು ಎದುರಿಗಿದ್ದ ಸವಾಲನ್ನು ಸ್ವೀಕರಿಸಲು ಸಿದ್ಧನಾದೆನು. ಹರಾಜು ನಡೆಯುವ ಸ್ಥಳಕ್ಕೆ ಹೇಗೆ ನುಗ್ಗಬೇಕು, ಹೇಗೆ ಪ್ರತಿಭಟಿಸಬೇಕು–ಎಂಬುದರ ಬಗ್ಗೆ ತುಂಬಾ ಯೋಚಿಸಬೇಕಾಯಿತು".

"ನಾನು ಮನೆಗೆ ಹೋಗಿ ಮೂಲೆ ಸೇರಿದ್ದ ಪೊಲೀಸ್ ಸಮವಸ್ತ್ರ ಹಾಕಿಕೊಂಡು ಹಿಂಬಾಗಿಲಿನಿಂದ ಸೈಕಲ್ ತುಳಿದುಕೊಂಡು ತಾಲೂಕು ಕಛೇರಿಯ ಕಡೆ ಸಾಗಿದೆನು. ಪೊಲೀಸ್ ಅಧಿಕಾರಿಯ ಠೀವಿಯಲ್ಲಿ ತಾಲ್ಲೂಕು ಕಛೇರಿ ಪ್ರವೇಶಿಸಿದೆ. ಬ್ರಿಟೀಶರಂತೆ ಬೆಳ್ಳಗಿದ್ದ ನನ್ನನ್ನು ನೋಡಿ ಪೊಲೀಸರೆಲ್ಲಾ ಸೆಲ್ಯೂಟ್ ಮಾಡುತ್ತಿದ್ದರು. ನಾನು ನೇರವಾಗಿ ಹರಾಜು ನಡೆಯುತ್ತಿದ್ದ ಸ್ಥಳಕ್ಕೆ ಧಾವಿಸಿದೆ. ಅಲ್ಲಿ ನಾನು ಜೇಬಿನಲ್ಲಿ ಬಚ್ಚಿಟ್ಟುಕೊಂಡಿದ್ದ ತ್ರಿವರ್ಣ ಧ್ವಜವನ್ನು ಹೊರತೆಗೆದು ಹಾರಿಸುತ್ತಾ– ಮಹಾತ್ಮ ಗಾಂಧೀಜಿ ಕೀ ಜೈ ಎಂದು ಜಯಕಾರ ಹಾಕಿದೆ. ಅಲ್ಲಿ ನೆರೆದಿದ್ದ ಪೊಲೀಸ್ ಅಧಿಕಾರಿಗಳು, ಕಾಂಟ್ರಾಕ್ಟ್‌ದಾರರು ಇದನ್ನು ಕಂಡು ನಿಬ್ಬೆರಗಾದರು. ನನ್ನ ಬಂಧನವಾಯಿತು. ಒಂದು ತಿಂಗಳ ಶಿಕ್ಷೆಯಾಯಿತು. ಅಂದು ಹೆಂಡದಂಗಡಿಗಳ ಹರಾಜು ನಡೆಯಲಿಲ್ಲ". ಇದೊಂದು ಚಾರಿತ್ರಿಕ ದಾಖಲೆ. ಆ ಕಾಲದ ಘಟನೆಯನ್ನು ಇಂದು ಕಣ್ಣ ಮುಂದಿಡುತ್ತದೆ.

ಹೀಗೆ ಬಳ್ಳಾರಿ ನಗರವೂ ಸೇರಿದಂತೆ ಜಿಲ್ಲೆಯಾದ್ಯಂತ ಈಚಲಮರ ಕಡಿಯುವುದು, ಹೆಂಡದಂಗಡಿಗಳ ಮುಂದೆ ಪಿಕೆಟಿಂಗ್ ನಡೆಸುವುದು, ವಿದೇಶಿ

ಬಟ್ಟೆಗಳನ್ನು ಸುಡುವುದು, ಪ್ರಭಾತ್ ಫೇರಿ ಹೊರಡಿಸುವುದು ಮುಂತಾದವುಗಳ ವಿಧದಲ್ಲಿ ಸವಿನಯ ಕಾಯಿದೆ ಭಂಗ ಚಳುವಳಿ ನಡೆಯಿತು. ೧೯೩೧ರಲ್ಲಿ ಕರ್ನಾಟಕದ ಪ್ರಾಂತೀಯ ಕಾಂಗ್ರೆಸ್ ಸಮಿತಿಯು ಪ್ರಕಟಿಸಿರುವ "ಕರ್ನಾಟಕದಲ್ಲಿ ಸತ್ಯಾಗ್ರಹ ವರದಿಯೂ" ಎಂಬ ಗ್ರಂಥದಲ್ಲಿ ಉಲ್ಲೇಖಿಸಿರುವಂತೆ ೧೯೩೦ರ ಸವಿನಯ ಕಾಯಿದೆ ಭಂಗ ಚಳುವಳಿಯಲ್ಲಿ ಭಾಗವಹಿಸಿ ಶಿಕ್ಷೆಗೊಳಗಾದ ಸತ್ಯಾಗ್ರಹಿಗಳ ಸಂಖ್ಯೆ ಬಳ್ಳಾರಿ ಜಿಲ್ಲೆಯಲ್ಲಿ ೭೭. ಚಾರಿತ್ರಿಕ ಕುತೂಹಲಕ್ಕೆ ಅವರ ಹೆಸರುಗಳನ್ನು ಗಮನಿಸಬಹುದು. ಸಿ.ವಿ.ಬಾಲಾಜಿ (೩ ತಿಂಗಳು, ೨೦ ರೂ. ದಂಡ ಅಥವಾ ೩ ವಾರ ಶಿಕ್ಷೆ), ಶೇಷಗಿರಿರಾವ್ (೩ ತಿಂಗಳು, ೨೦ ರೂ. ದಂಡ ಅಥವಾ ೩ ವಾರ ಶಿಕ್ಷೆ), ಸಣ್ಣತಮ್ಮಪ್ಪ (೯ ತಿಂಗಳು, ೬ ವಾರ ೨೫ ರೂ. ಅಥವಾ ೩ ವಾರ ಶಿಕ್ಷೆ), ಶ್ರೀಪಾದ ರಾಜ, ಈಶ್ವರಪ್ಪ, ಭೀಮಪ್ಪ, ಭೀಮಾಚಾರ್ಯ ಕೊಟ್ಟೂರು ಬಸಪ್ಪ, ಸಣ್ಣತಮ್ಮಪ್ಪ (೬ ತಿಂಗಳು, ೪ ವಾರ, ೫೦ ರೂ. ದಂಡ ಅಥವಾ ೨ ವಾರ ಶಿಕ್ಷೆ), ಸಣ್ಣ ರುದ್ರಪ್ಪ, ಕೊಟ್ರಪ್ಪ (೫ ತಿಂಗಳು, ೨ ವಾರ ಮತ್ತು ದಂಡ ಅಥವಾ ಒಂದು ವಾರ ಶಿಕ್ಷೆ), ಗುರುಪಾದಪ್ಪ (೩ ತಿಂಗಳು, ೨ ವಾರ ಮತ್ತು ದಂಡ ಅಥವಾ ಒಂದು ವಾರ ಶಿಕ್ಷೆ), ನೆಲ್ಲಿಬೀಡ, ಕೆ. ಕೃಷ್ಣಮೂರ್ತಿ (ರಾಜೀನಾಮೆ ಕೊಟ್ಟ ಹೆಡ್‌ಕಾನ್‌ಸ್ಟೇಬಲ್), ಅಜ್ಜಪ್ಪ (೩ ತಿಂಗಳು ೨ ವಾರ ಕಠಿಣ ಶಿಕ್ಷೆ), ಹಳ್ಳಿಗುರುಬಸಪ್ಪ (೩ ತಿಂಗಳು, ೨ ವಾರ ಸಾದಾಶಿಕ್ಷೆ), ರಾಘವ ವಿಠೋಬಪ್ಪ, ಲಿಂಗಪ್ಪ, ಕಂಪಲಿ ಕೊಟ್ರಪ್ಪ, ಬಿ. ವಿ. ಶೇಷಗಿರಿರಾವ್ (೧ ತಿಂಗಳು ಸಾದಾ ಶಿಕ್ಷೆ), ಡಿ.ಗೋಪಾಲರಾವ್, ಕೆ. ಕೊಟ್ರಪ್ಪ, ಕೆ. ಗುರುನಾಥ, (೧ ತಿಂಗಳು ಸಾದಾಶಿಕ್ಷೆ), ಡಿ.ಡಿ.ಜಾಂಬಾಳೇಕರ, ಕೆ.ಜಿ.ಕುಲಕರ್ಣಿ, ಎ ತಿರುಮಲರಾವ್ (೩ ತಿಂಗಳು, ೩ ವಾರ ಕಠಿಣ ಶಿಕ್ಷೆ), ಶಾಮರಾವ್, ಜಗನ್ನಾಥರಾವ್, ಅನಂತರಾವ್, ಶ್ರೀಧರ (೩ ತಿಂಗಳು, ೩ ವಾರ ಕಠಿಣ ಶಿಕ್ಷೆ), ಎ. ಪೂರ್ಣಾಚಾರ್ಯ ರುದ್ರಪ್ಪ (೧ ತಿಂಗಳು, ಕಠಿಣ ಶಿಕ್ಷೆ), ಬಸವನಗೌಡ, ಬೊಮ್ಮಪ್ಪ, ಚಂದ್ರಪ್ಪ, ಕೆ. ಬೊಮ್ಮಪ್ಪ, ಎಂ. ಗಿರಿ (೩ ತಿಂಗಳು, ೩ ವಾರ ಕಠಿಣ ಶಿಕ್ಷೆ), ಸಿದ್ಧಪ್ಪ ದಯಾನಂದ ರಾಜು, ಕೆ. ಸೀತಾರಾಮ (೬ ತಿಂಗಳು, ಕಠಿಣ ಶಿಕ್ಷೆ), ಮಜಲಿ, ಅನವಟ್ಟಿ ಕೆ. ವಿಷ್ಣು, ದೇವಿಹೊಸೂರು, ಲಿಂಗಪ್ಪ, ಭೀಮಸೇನಾಚಾರ್ಯ, ಟಿ. ಸುಬ್ರಹ್ಮಣ್ಯ, ಡಿ.ಎಚ್. ಕೃಷ್ಣರಾವ್ (೧ ವರ್ಷ ಶಿಕ್ಷೆ), ಮುತ್ಯಾಲರಾವ್, ಕೆ. ಸುಬ್ರಾಯ, ಬಿ. ವೆಂಕಟರಾವ್, ಡಿ. ಗೋಪಾಲ ರಾವ್, ಸ್ವಾಮಿ ವೆಂಕಟಾಚಾರ್ಯ, ಆರ್. ಹನುಮಂತರಾವ್



(೧ ವರ್ಷ ಸಾದಾಶಿಕ್ಷೆ), ಕೊಟ್ರಪ್ಪ, ನರಸಿಂಹಮೂರ್ತಿ, ಪಿ. ಕೊಂಡಯ್ಯ (೬ತಿಂಗಳು ಕಠಿಣ ಶಿಕ್ಷೆ), ಟಿ.ವಿ.ಶೇಷಗಿರಿರಾವ್, ಬಿ. ನರಸಿಂಹರಾವ್, ಬಿ.ವಿ. ರಾಮ್ರಪರ್ಣಿ, ಆರ್. ಲಕ್ಷ್ಮಣಾಚಾರ್ಯ, ಪಿ. ಆರ್. ಸದಾಶಿವ, ಶಂಕರ ನಾರಾಯಣ, ಪಾರ್ಥಸಾರಥಿ, ಗೋವಿಂದ ಹರಹರಿ (೬ ತಿಂಗಳು ಕಠಿಣ ಶಿಕ್ಷೆ), ಎಂ. ರಾಘವೇಂದ್ರರಾವ್ (೧ ವರ್ಷ ಸಾದಾಶಿಕ್ಷೆ), ಕಲ್ಲಪ್ಪ ಬೆನ್ನೂರ (೧ ತಿಂಗಳು, ೧೦ ರೂ. ದಂಡ ಅಥವಾ ಒಂದು ೧ ತಿಂಗಳು), ಡಿ. ಎಚ್. ವೆಂಕೋಬರಾವ್ (೧ ತಿಂಗಳು ೨೫ ರೂ. ದಂಡ), ಅಮರಪ್ಪ ಗದಗ (೩ ತಿಂಗಳು, ೫೦ ರೂ. ದಂಡ ಅಥವಾ ೧ ತಿಂಗಳು), ವಿರೂಪಾಕ್ಷರಾವ್ (೩ತಿಂಗಳು, ೫೦ ರೂ.), ಆರ್. ಎ. ಕೃಷ್ಣರಾವ್ (೩ ತಿಂಗಳು, ೫೦ ರೂ.) ವೆಂಕಟರಾಮಪ್ಪ (೩ ತಿಂಗಳು, ೫೦ ರೂ.)–ಹೀಗೆ ೧೯೩೦ರ ಚಳುವಳಿ ಬಳ್ಳಾರಿಯಲ್ಲಿ ಹೋರಾಟದ ಉತ್ಸಾಹವನ್ನು ಹೆಚ್ಚು ಮಾಡಿತ್ತು.

ಬಳ್ಳಾರಿಯ ಹೊರವಲಯದ ಮತ್ತು ಗ್ರಾಮೀಣ ಭಾಗದ ಹೆಚ್ಚು ಕ್ರಿಯಾಶೀಲವಾಗಿದ್ದ ಎಮ್ಮಿಗನೂರು ಎಂಬ ಗ್ರಾಮದಲ್ಲಿ ಸತ್ಯಾಗ್ರಹವನ್ನು ಸಾಮೂಹಿಕ ಸತ್ಯಾಗ್ರಹ ಮತ್ತು ವೈಯಕ್ತಿಕ ಸತ್ಯಾಗ್ರಹ ಎಂಬ ಎರಡು ಮಾದರಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. "ಸತ್ಯಾಗ್ರಹಿ ತಂಡ" ವೊಂದನ್ನು ರಚಿಸಿಕೊಂಡಿದ್ದರು. ಅಷ್ಟೇ ಅಲ್ಲ ಚರಿತ್ರೆಯಲ್ಲಿ "ಎಮ್ಮಿಗನೂರ ಸತ್ಯಾಗ್ರಹಿಗಳು" ಎಂದೇ ದಾಖಲಾಗಿದೆ.

ವಸಾಹತುಶಾಹಿ ಬ್ರಿಟೀಶ್ ಸರಕಾರದ ಯುದ್ಧನೀತಿಯನ್ನು ವಿರೋಧಿಸಿ ಬಳ್ಳಾರಿ ಜಿಲ್ಲೆಯಲ್ಲಿ ಆಗ ವೈಯಕ್ತಿಕ ಸತ್ಯಾಗ್ರಹದಲ್ಲಿ ತೊಡಗಿಸಿಕೊಂಡರು. ಈ ಕಾಲಾವಧಿಯಲ್ಲಿ ವಸಾಹತುಶಾಹಿ ಬ್ರಿಟೀಶ್ ಸರಕಾರದ ಯುದ್ಧ ನೀತಿಯ ವಿರುದ್ಧ ಜನಜಾಗೃತಿಯನ್ನುಂಟು ಮಾಡಲು ಕಾಂಗ್ರೆಸ್ ಕಾರ್ಯಕರ್ತರು ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಪ್ರವಾಸ ನಡೆಸಿದರು. ಯುದ್ಧ ವಿರೋಧಿ ಘೋಷಣೆ ಕೂಗಿ ಸತ್ಯಾಗ್ರಹಿಗಳು ಬಂಧನಕ್ಕೊಳಗಾದರು. ಬಳ್ಳಾರಿ ಜಿಲ್ಲೆಯಲ್ಲಿ ನಡೆದ ವ್ಯಕ್ತಿ ಸತ್ಯಾಗ್ರಹದ ಸಂದರ್ಭದಲ್ಲಿ "ಎಮ್ಮಿಗನೂರು ತಂಡ"ವೊಂದು "ದೆಹಲಿ ಚಲೋ" ಸಾಹಸ ನಡೆಸಿತು. ಈ ತಂಡದಲ್ಲಿ ಎಂ. ಸಿದ್ಧಯ್ಯ, ಎಂ. ಭೀಮರಾವ್, ಡಾ. ಕೃಷ್ಣಮೂರ್ತಿ, ಎಂ.ವೈ.ಸೋಮಪ್ಪ, ಪೆದ್ದ ಕಡಬೂರು ವೆಂಕಟರೆಡ್ಡಿ, ರಾಘವೇಂದ್ರರಾವ್ ಮತ್ತು ವೆಂಕಟರಾಮಪ್ಪ–ಇದ್ದರು. ಈ ತಂಡವು, ಆ ಕಾಲದಲ್ಲಿ

"ದೆಹಲಿ ಚಲೋ" ಸಾಹಸ ಯಾತ್ರೆಯನ್ನು ೨೪ ಜನವರಿ ೧೯೪೧ರಲ್ಲಿ ಪ್ರಾರಂಭಿಸಿತು. ಈ ತಂಡವು ಬಳ್ಳಾರಿ, ಕರ್ನೂಲು, ಗುಂಟೂರು, ಕೃಷ್ಣ, ಪೂರ್ವ ಗೋದಾವರಿ–ಪಶ್ಚಿಮ ಗೋದಾವರಿ ಜಿಲ್ಲೆಗಳ ೨೧೮ ಹಳ್ಳಿಗಳಲ್ಲಿ ಪ್ರವಾಸ ಮಾಡಿ ಜನ ಜಾಗೃತಿಯನ್ನುಂಟು ಮಾಡಿತು. ಪ್ರತಿಯೊಂದು ಹಳ್ಳಿಯಲ್ಲಿಯೂ ಸತ್ಯಾಗ್ರಹಿಗಳು ಬ್ರಿಟೀಶ್ ಸರಕಾರದ ಯುದ್ಧ ನೀತಿಯ ವಿರುದ್ಧ ಜನರಿಗೆ ತಂಡದ ಸದಸ್ಯರು ತಿಳುವಳಿಕೆ ನೀಡಿದರು. ಗಾಂಧೀಜಿಯವರ ಸ್ವಾವಲಂಬಿ ಭಾರತದ ಪರಿಕಲ್ಪನೆಯನ್ನು, ರಾಷ್ಟ್ರೀಯ ಭಾವೈಕ್ಯತೆಯ ಪರಿಕಲ್ಪನೆಗಳನ್ನು ಪ್ರಚಾರ ಮಾಡಿದರು. ತಮ್ಮ ಪ್ರವಾಸದ ಸಂದರ್ಭದಲ್ಲಿ ಈ ತಂಡವು ವರ್ದಾದಲ್ಲಿನ ಸೇವಾಗ್ರಾಮದಲ್ಲಿ (೧೧ ಮೇ ೧೯೪೨) ರಂದು ಮಹಾತ್ಮ ಗಾಂಧೀಜಿಯವರ "ದರ್ಶನ" ಪಡೆಯಿತು. ಇದನ್ನು ಈ ತಂಡದ ಸದಸ್ಯರು ಮಹಾತ್ಮ ಗಾಂಧೀಜಿ ಭೇಟಿ ದರ್ಶನವನ್ನು ಭಾರತಮಾತೆಯ ವೀರಪುತ್ರನ ಭೇಟಿ–ದರ್ಶನವೆಂದು ನಂಬಿ ಕೊಂಡರು. ಈ ತಂಡವು ನಾಗಪುರ ತಲುಪಿದಾಗ ಬಂಧನ ಭೀತಿಯನ್ನು ಅನುಭವಿಸಿತಾದರೂ ದೇಶಕ್ಕಾಗಿ ಏನೆಲ್ಲಾ ಮಾಡಬೇಕೆಂದು ತೀರ್ಮಾನ ಮಾಡಿದ್ದ ಎಮ್ಮಿಗನೂರು ಸತ್ಯಾಗ್ರಹಿ ತಂಡದ ಸದಸ್ಯರು ಬಂಧನಕ್ಕೊಳಗಾದರು. ಪೊಲೀಸರು ಬಂಧಿತರನ್ನು ಬಳ್ಳಾರಿಗೆ ತಂದು ಬಿಡುಗಡೆ ಮಾಡಿದರು.

ಬಳ್ಳಾರಿಯ ಸ್ವಾತಂತ್ರ್ಯ ಹೋರಾಟದ ಚರಿತ್ರೆಯಲ್ಲಿ "ಎಮ್ಮಿಗನೂರಿನ ಸತ್ಯಾಗ್ರಹಿ ತಂಡ" ಸಾಧನೆ ಮರೆಯಾಗಿರುವ ಘಟನೆಯಾಗಿದೆ.

* * *

ಬಳ್ಳಾರಿ ನಗರ ಕೇಂದ್ರದಲ್ಲಿ ಪರಿಸರದ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರ ಸಂಕ್ಷಿಪ್ತ ಜೀವನ ವಿವರಗಳೊಂದಿಗೆ ಇಲ್ಲಿ ದಾಖಲಿಸ ಬಹುದು.

**ಕಲ್ಲೂರ ಸುಬ್ಬರಾವ್:** ೧೯೨೦–೨೧, ೧೯೩೦, ೧೯೩೨, ೧೯೪೧, ೧೯೪೨–೪೫ರಲ್ಲಿ ಮಹಾತ್ಮ ಗಾಂಧೀಜಿಯವರ ಪ್ರಭಾವದಲ್ಲಿ ನಿರಂತರವಾಗಿ ತೊಡಗಿಸಿಕೊಂಡು, ಧೃತಿಗೆಡದಂತೆ ತಮ್ಮ ಬದುಕನ್ನು ಮೀಸಲಾಗಿಟ್ಟು ದುಡಿದ ಇವರು ಏಳು ವರ್ಷಗಳ ಕಾರಾಗೃಹ ಶಿಕ್ಷೆಯನ್ನು ಅನುಭವಿಸಿದ್ದರು. ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಸಮಾನ ಅಧಿಕಾರವನ್ನು ಹೊಂದಿದ್ದ ಇವರು



ತಮ್ಮ ಪ್ರಚೋದಿತ ಭಾಷಣಗಳ ಮೂಲಕ ಸ್ವಾತಂತ್ರ್ಯದ ಮಹತ್ವವನ್ನು ಪ್ರಚಾರ ಪಡಿಸುತ್ತಿದ್ದರು.

**ತಾಡಪತ್ರಿ ವೆಂಕಟರಮಣಾಚಾರ್ಯ:** ಬಳ್ಳಾರಿಯನ್ನೇ ಕರ್ಮಭೂಮಿ ಯನ್ನಾಗಿಸಿಕೊಂಡಿದ್ದ ಇವರು, ೧೯೨೦–೨೧ರ ಗಾಂಧಿ ಸ್ವಾತಂತ್ರ್ಯೋತ್ಸವ ವನ್ನೇ ಜಾರಿಗೆ ತಂದಿದ್ದರು. ತಮ್ಮೊಂದಿಗೆ ನೂರಾರು ಸತ್ಯಾಗ್ರಹಿಗಳನ್ನು ತಯಾರು ಮಾಡಿ ಬಳ್ಳಾರಿ ಜೈಲನ್ನು ತುಂಬಿಸಿ, ಪೊಲೀಸರಿಗೆ ಆತಂಕವನ್ನುಂಟು ಮಾಡಿದ್ದರು. ೧೯೩೦–೩೨, ೧೯೪೧, ೧೯೪೨–೪೩ರ ಘಟನೆಗಳಲ್ಲಿ ಶಿಕ್ಷೆಯನ್ನು ಅನುಭವಿಸಿದರು. ಮಿತಭಾಷಿಯಾಗಿದ್ದ ಇವರು ರಾಷ್ಟ್ರಪ್ರೇಮದ ಬಗ್ಗೆ ರಚನಾತ್ಮಕವಾದ ಕಾರ್ಯಕ್ರಮಗಳ ಮೂಲಕ ಅಮಿತ ಶ್ರದ್ಧೆಯನ್ನು ಹೊಂದಿದ್ದ ಸರಳಜೀವಿ.

**ಡಿ.ಎಚ್.ವೆಂಕೋಬರಾವ್:** ೧೯೩೦ರಿಂದ ಸತ್ಯಾಗ್ರಹಿಗಳಾಗಿದ್ದರು. ಎಲ್ಲಾ ವಿದ್ಯಮಾನದ ಆಂದೋಲನಗಳಲ್ಲಿ ಸಕ್ರಿಯವಾಗಿ ಭಾಗಿಯಾಗಿದ್ದರು. ೧೯೪೨–೪೪ರ ಕೊನೆಯ ಹೋರಾಟದಲ್ಲಿ ಹದಿನಾರು ತಿಂಗಳುಗಳ ಸ್ಥಾನಬದ್ಧತೆಯಲ್ಲಿದ್ದು ನಲವತ್ತು ವರ್ಷಗಳವರೆಗೆ ಇಡೀ ಕುಟುಂಬದ ಸದಸ್ಯರು ಖಾದಿ ಧರಿಸಿ ಮಾದರಿ ಮನೆತನವೆನಿಸಿಕೊಂಡಿದ್ದರು.

**ಕಲ್ಗಣಿ ಶಿವರುದ್ರಪ್ಪ:** ೧೯೪೦–೪೧ರಲ್ಲಿ ವ್ಯಕ್ತಿ ಸತ್ಯಾಗ್ರಹದಲ್ಲಿ ನಾಲ್ಕು ತಿಂಗಳು ಶಿಕ್ಷೆ ಅನುಭವಿಸಿದರು.

**ಟೇಕೂರು ನಾರಾಯಣ ಶಾಸ್ತ್ರಿ:** ೧೯೨೧ರಲ್ಲಿ ಆರು ತಿಂಗಳು ಜೈಲುಶಿಕ್ಷೆ ಅನುಭವಿಸಿದ ನಂತರ ತಮ್ಮ ಜೀವನವನ್ನು ರಾಷ್ಟ್ರಪ್ರೇಮ ಸಾರುವ ಕಾರ್ಯಕ್ಕೆ ಮೀಸಲಾಗಿಟ್ಟರು. (ಇವರ ಕಿರಿಯ ಸಹೋದರ ಟೇಕೂರು ಸುಬ್ರಹ್ಮಣ್ಯಂ– ಬಳ್ಳಾರಿಯ ಮೊದಲ ಲೋಕಸಭಾ ಸದಸ್ಯರು). ಟಿ.ಬಿ.ಕೇಶವರಾವ್ ಮತ್ತು ಟಿ.ಬಿ.ಜಯಲಕ್ಷ್ಮೀದೇವಿ: ಬಳ್ಳಾರಿ ಜಿಲ್ಲಾ ಸ್ವಾತಂತ್ರ್ಯ ಹೋರಾಟದ ಚರಿತ್ರೆಯ ಅಪರೂಪದ ತ್ಯಾಗಶೀಲಗುಣದ ದಂಪತಿಗಳು. ಇವರು ಹರಿಜನ ಮಕ್ಕಳನ್ನು ಪಾಲನೆ ಪೋಷಣೆ ಮಾಡಿದ ಸುಧಾರಣಾವಾದಿಗಳು. ಗಾಂಧೀಜಿ ಯವರ ಪ್ರಭಾವದಲ್ಲಿದ್ದವರು. ೧೯೩೨ರಲ್ಲಿ ವೆಲ್ಲೂರಿನ ಮಹಿಳಾ ಜೈಲಿನಲ್ಲಿ ಬಂಧಿತರಾಗಿದ್ದರು. ಟೇಕೂರು ಸುಬ್ರಹ್ಮಣ್ಯಂ: ಸ್ವತಂತ್ರ ಭಾರತದ ಬಳ್ಳಾರಿಯ ಲೋಕಸಭಾ ಸದಸ್ಯರು. ಸ್ವಾತಂತ್ರ್ಯಾಪೇಕ್ಷಿಗಳಾಗಿದ್ದ ಇವರು ವಕೀಲ ವೃತ್ತಿಗೆ

ಸ್ವಯಂ ನಿವೃತ್ತಿ ಘೋಷಿಸಿ ಬಳ್ಳಾರಿಯನ್ನು ಕ್ರಿಯಾಶೀಲಗೊಳಿಸಿದ ಪ್ರಮುಖರಲ್ಲೊಬ್ಬರು. ಮದ್ರಾಸ್ ಪ್ರಾವಿನ್ಸಿಯ ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿಗಳಾಗಿದ್ದವರು. ವಿ.ಎಂ.ಗಿರಿ: ಪದವೀಧರರು. ಸರಕಾರಿ ನೌಕರಿ ಸಿಕ್ಕಿದ್ದರೂ ದೇಶಕ್ಕಾಗಿ ಅದನ್ನು ತ್ಯಜಿಸಿ, ೧೯೩೦ರಿಂದ ರಾಷ್ಟ್ರೀಯ ಪ್ರಗತಿ ಕಾರ್ಯಗಳಲ್ಲಿ ತೊಡಗಿಸಿಕೊಂಡರು. ೧೯೩೦ರಲ್ಲಿ ೬ ತಿಂಗಳು, ೧೯೩೨ರಲ್ಲಿ ಒಂದು ವರ್ಷದ ಕಾರಾಗೃಹ ಶಿಕ್ಷೆ ಅನುಭವಿಸಿದರು. ನಿರಾಡಂಬರ, ಸರಳ, ನಿಷ್ಕಪಟ, ನಿಷ್ಕಳಂಕ ವ್ಯಕ್ತಿತ್ವ.

* * *

೧೯೩೨ರಲ್ಲಿ ನಡೆದ ಒಂದು ಘಟನೆಯನ್ನು ಕೆ. ಗೌಡಪ್ಪ ಬಣಕಾರ ಹೀಗೆ ವಿವರಿಸುತ್ತಾರೆ. ಇವರು ಕೊಟ್ಟೂರು ವಾಸಿಗಳಾಗಿದ್ದರೂ ಬಳ್ಳಾರಿ ಜೈಲಿನಲ್ಲಿ ನಡೆದ ಘಟನೆಯನ್ನು ತಮ್ಮ ದಿನಚರಿಯಲ್ಲಿ ಹೀಗೆ ದಾಖಲಿಸುತ್ತಾರೆ. ಚಾರಿತ್ರಿಕ ದಾಖಲೆಯಾಗಿ ಮಹತ್ವವಿರುವ ಈ ವಿಚಾರವನ್ನು ಯಥಾವತ್ತಾಗಿ ಗಮನಿಸಬಹುದು.

"೧೨–೦೯–೧೯೩೨ನೇ ಸೋಮವಾರ ಶಾಂತರೀತಿಯಿಂದ ಖೈದಿಗಳ "ಫೈಲ್" ಅಂದರೆ ಅಧಿಕಾರಿಗಳ ತನಿಖೆಯು ಸಾಗಿತು. ಲಾಹೋರ ಮೊಕದ್ದಮೆಯ ಡಾಕ್ಟರ್ ದಯಾಪ್ರಸಾದ್, ಮಹಾವೀರ ಸಿಂಹ ಇವರು, ಇಲ್ಲಿಗೆ ಬಂದಾಗಿನಿಂದಲೂ ತನಿಖೆಗೆ ತಮ್ಮ ಕೋಣೆಯ ಮುಂದೆಯೇ ನಿಲ್ಲುತ್ತಿದ್ದರು. ಆದರೆ ಹೊಸದಾಗಿ ಬಂದ ಸುಪರಿಂಟೆಂಡೆಂಟ್‌ರಾದ ಇನ್ಸ್ ಸಾಹೇಬರು ಅವರೊಂದಿಗೆ ಜಗಳ ಪ್ರಾರಂಭಿಸಿದರು. ಕೋಣೆಗಳೆಲ್ಲಾ ಸೋಮವಾರ ಬೀಗ ಹಾಕುವ ಪದ್ಧತಿ ಇದೆ. ನಾವು ಶಾಂತವಾಗಿ ನಮ್ಮ ಬ್ಲಾಕುಗಳ ಹತ್ತಿರ ಕೂತಿದ್ದೆವು. ಆಗ ಲಾಹೋರ ಖೈದಿಗಳನ್ನು ಕಟ್ಟಿ ಕೈಕಾಲಿಗೆ ಬೇಡಿ ಹಾಕಲು ಕ್ಲೋಸ್‌ಪ್ರಿಸನ್‌ನಿಂದ, ಮೇನ್ ಜೇರಿಗೆ ಹೊತ್ತುಕೊಂಡು ಹೋಗುತ್ತಿದ್ದರು. ಅವರು, "ಇಂಕಿಲಾಬ್ ಜಿಂದಾಬಾದ್" "ಲಾಂಗ್‌ಲೀವ್ ರೆವಲ್ಯೂಶನ್" ಎಂದು ಕೇಕೆ ಹಾಕುತ್ತಿದ್ದರು. ದೂರದಲ್ಲಿದ್ದ ಕೆಲ ರಾಜಕೀಯ ಖೈದಿಗಳು (ಸುಮಾರು) ಸಹಾನುಭೂತಿಯಿಂದ "ಮಹಾತ್ಮ ಗಾಂಧೀ ಕೀ ಜೈ–ವಂದೇಮಾತರಂ" ಎಂದು ಕೂಗಿದರು. ಅಷ್ಟೇ! ಪುನಃ ಶಾಂತವಾದಂತೆ ಕಂಡು ಬಂದಿತು".



"ಅರ್ಧಗಂಟೆಯ ಮೇಲೆ ಸುಮಾರು ಐವತ್ತು ರಿಸರ್ವ್ ಪೊಲೀಸರು ಲಾಠಿಗಳೊಂದಿಗೆ ನಮ್ಮ ಮೇಲೆ ದಾಳಿ ಮಾಡಿದರು. ಜೇಲದೊಳಗಿದ್ದ ೬೦ ಜನ ವಾರ್ಡರುಗಳೂ ಹಿಂದೆ ಸುಪರಿಂಟೆಂಡರಾಗಿದ್ದ ಮೇಜರ್ ರಮಣ ಅವರೂ ಡಾ. ಶ್ಯಾಮ್ ಕುಟ್ಟಿಯೂ, ಡೆಪ್ಯೂಟಿ ಜೇಲರ್‌ರೂ, ಗುಮಾಸ್ತರೂ ಲಾಠೀಗಳೊಂದಿಗೆ ರಿಸರ್ವ್ ಸಮಯಕ್ಕೆ ಬಂದರು. ರಿಸರ್ವ್‌ದವರು ಶಿಸ್ತಿನಿಂದ ಹೊಡೆದರೆ, ವಾರ್ಡರರೂ ಅಧಿಕಾರಿಗಳೂ ಸಿಕ್ಕಾಪಟ್ಟೆ ಪ್ರಹರಿಸಿದರು. ಬಾಲರು, ವೃದ್ಧರು ರೋಗಿಗಳು ಎಂಬ ವಿವೇಚನೆಯಿಲ್ಲದೆ. ಎಲ್ಲರೂ ಈ ನರಕ ದರ್ಶನಕ್ಕೆ ಗುರಿಯಾದರು. ಮೇಜರ್ ರಮಣರು ಕೋಣೆಯಿಂದ ಕೋಣೆಯ ಕಡೆಗೆ ಹೋಗಿ ತಮಗೆ ಇಷ್ಟವಿಲ್ಲದವರನ್ನೆಲ್ಲಾ ಬೇಟೆಯಾಡಿ ಹೊಡೆದರು. ಮೇಜರ್ ರಮಣರು ಆಸ್ಪತ್ರೆಗೆ ಹೋಗಿ ಅಲ್ಲಿದ್ದವರನ್ನೆಲ್ಲಾ ಸದೆಬಡೆದು, ಜೈಲಿನ ಪಾಠಶಾಲೆಗೆ ನುಗ್ಗಿದರು. ಅಲ್ಲಿದ್ದ ಉಪಾಧ್ಯಾಯರು ಗಡಗಡ ನಡುಗುತ್ತ ಬಾಗಿಲಿಗೆ ಬೀಗ ತೆಗೆಸಿ ಎಲ್ಲರನ್ನೂ ತಾವು ಮನಸಾರೆ ಹೊಡೆದರು".

ಬಳ್ಳಾರಿಯ ಜೈಲಿನಲ್ಲಿ ನಡೆದ ಈ ಭೀಷಣ ಲಾಠೀ ಪ್ರಹಾರ ಅಂದಿನ ಭೀಕರತೆಯ ಚಿತ್ರವನ್ನು ಯಥಾವತ್ತಾಗಿ ನಮ್ಮ ಮುಂದಿಡುತ್ತದೆ.

**೧೯೩೪:** ಕಾಯಿದೆಭಂಗ ಚಳುವಳಿಯ ಉತ್ಸಾಹ ಮತ್ತು ವಿಶ್ವಾಸಗಳನ್ನು ನಿಯಂತ್ರಿಸುವಲ್ಲಿ ಪೊಲೀಸರ ಮಿತಿಮೀರಿದ ವರ್ತನೆ ಬಳ್ಳಾರಿಯಲ್ಲಿ ಯಶಸ್ವಿಯಾಯಿತು. ಇದನ್ನು ಕಡೆಗಣಿಸಿ ಪುನಶ್ಚೇತನಗೊಳಿಸುವ ಸಂದರ್ಭ ಒದಗಿ ಬಂದಿತು. ೧೯೩೨ರಲ್ಲಿ ಲಂಡನ್ನಿನಲ್ಲಿ ನಡೆದ ದುಂಡು ಮೇಜಿನ ಪರಿಷತ್ತು. ಅಖಂಡ ಭಾರತದಿಂದ ಕಾಂಗ್ರೆಸ್ ಏಕೈಕ ಪ್ರತಿನಿಧಿಯಾಗಿ ಗಾಂಧೀಜಿ ಭಾಗವಹಿಸಿದ್ದರು. ಅಲ್ಲಿ ಮಂಡಿಸಿ, ಅಂಗೀಕಾರಗೊಂಡಿದ್ದ ನಿರ್ಣಯದ ವಿರುದ್ಧ ಗಾಂಧೀಜಿ ತೀವ್ರವಾಗಿ ಪ್ರತಿಭಟಿಸಿದರು. ದಲಿತ ಅಥವಾ ಅಸ್ಪೃಶ್ಯರಿಗೆ ಸ್ವತಂತ್ರ ಮತದಾನ ನೀಡುವ ಪ್ರತ್ಯೇಕ ಸಾಂಘಿಕ ವ್ಯವಸ್ಥೆ ಕಲ್ಪಿಸಿ, ಭಾರತದ ಹಿಂದೂ ಸಮಾಜದಿಂದ ವಿಭಕ್ತಗೊಳಿಸುವ ಪ್ರಯತ್ನವನ್ನು ಬ್ರಿಟೀಶರು ತಮ್ಮ ಅಧಿಕಾರದ ಒಂದು ಭಾಗವಾಗಿ ಬಳಸಿಕೊಂಡಿದ್ದರು. ಲಂಡನ್ನಿನಲ್ಲಿ ಈ ನಿರ್ಣಯವನ್ನು ವಿರೋಧಿಸಿ ಪ್ರತಿಭಟಿಸಿದ್ದರಿಂದ ಭಾರತಕ್ಕೆ ಹಿಂದಿರುಗಿದ ತಕ್ಷಣ ಗಾಂಧೀಜಿಯವರನ್ನು ಬಂಧಿಸಿ (ಯರವಾಡ) ಸೆರೆಮನೆಗೆ ಕಳುಹಿಸಲಾಯಿತು. ಸೆರೆಮನೆಯಿಂದ ತಮ್ಮ ನಿರ್ಧಾರವನ್ನು ಮರುಪ್ರಕಟಿಸಿ ಮಾರಣಾಂತಿಕ ಉಪವಾಸ ಸತ್ಯಾಗ್ರಹ ಕೈಕೊಂಡರು. ಈ ವಿಷಯದಲ್ಲಿ ಗಾಂಧೀಜಿಯವರೊಂದಿಗೆ ಬಿ.

ಆರ್. ಅಂಬೇಡ್ಕರ್ ಸೇರಿದಂತೆ ಹಲವು ದಲಿತ ಮತ್ತು ದಲಿತಪರ ಚಿಂತಕರೊಂದಿಗೆ ಭಿನ್ನಾಭಿಪ್ರಾಯವುಂಟಾಯಿತು. ಗಾಂಧೀಜಿಯವರ ಸತ್ಯಾಗ್ರಹ ನಿಷ್ಠುರವೂ ಕಠೋರವೂ ಆಗಿದ್ದು ಭಾರತದೇಶ ಬಡಿದೆದ್ದಂತೆ ಚುರುಕಾಗಿದ್ದರಿಂದ ಬ್ರಿಟೀಶರು ಒಪ್ಪಂದದ ಮೇರೆಗೆ ತಮ್ಮ ನಿರ್ಣಯವನ್ನು ಹಿಂಪಡೆದರು. ಗಾಂಧೀಜಿಯವರು ನಿರ್ಣಯದ ಹಿಂತೆಗೆತದಿಂದ ದಲಿತರಿಗೆ ತಪ್ಪು ಸಂದೇಶ ಹೋಗಬಾರದೆಂದು ದೇಶದಾದ್ಯಂತ ಪ್ರವಾಸ ಮಾಡಿ ಹರಿಜನೋದ್ಧಾರ, ಹರಿಜನ ನಿಧಿ ಸಂಗ್ರಹ–ಉದ್ದೇಶ ಪ್ರಕಟಿಸಿದರು. ಹೀಗೆ ಮಾಡಿದ ಪ್ರವಾಸ ಕಾರವಾರದಿಂದ ಬಿಜಾಪುರದವರೆಗೆ ಮಾರ್ಗಮಧ್ಯೆ ಬಳ್ಳಾರಿ ಜಿಲ್ಲೆಯೂ ಸೇರ್ಪಡೆಯಾಗಿತ್ತು. ೧೯೩೪ರ ಮಾರ್ಚ್ ೧, ೨,ಮತ್ತು ೩ ಜಿಲ್ಲೆಯ ಪ್ರವಾಸ. ೧ರ ರಾತ್ರಿ ಹರಪನಹಳ್ಳಿಯಲ್ಲಿ, ೨ರ ರಾತ್ರಿ ಸಂಡೂರಿನಲ್ಲಿ ವಾಸ. ೩ರ ಬೆಳಿಗ್ಗೆ ಬಳ್ಳಾರಿ, ಹೊಸಪೇಟೆ, ಬಾಣಾಪುರಗಳ ಮೂಲಕ ಪ್ರವಾಸ ಮುಂದುವರೆಸಿದರು. ಈ ಮೂರು ದಿನಗಳ ಜಿಲ್ಲಾ ಪ್ರವಾಸವು ಬಳ್ಳಾರಿ ಜಿಲ್ಲಾ ಸ್ವಾತಂತ್ರ್ಯ ಹೋರಾಟ ಚರಿತ್ರೆಯಲ್ಲಿ ಪ್ರಮುಖ ಘಟನೆಯಾಗಿದೆ. ಮಹತ್ವದ ಅಂಶವೆಂದರೆ ಉತ್ಸಾಹ ಕಳೆದುಕೊಂಡು ನಿಸ್ತೇಜಗೊಳ್ಳುತ್ತಿದ್ದ ಸ್ವಾತಂತ್ರ್ಯಾಪೇಕ್ಷೆಯು ಗಾಂಧೀಜಿಯವರ ಪ್ರವಾಸದ ಮೂಲಕ ತೀವ್ರಗೊಂಡಿದ್ದು. ಹರಪನಹಳ್ಳಿ, ಕೊಟ್ಟೂರು, ಕೂಡ್ಲಿಗಿ, ಸಂಡೂರು ಮತ್ತು ಬಳ್ಳಾರಿ–ಸ್ವಾತಂತ್ರ್ಯಾಪೇಕ್ಷೆಯ ಯುವಕರಿಗೆ ಕೇಂದ್ರಗಳಾಗಿ ಪರಿವರ್ತನೆ ಗೊಂಡವು.

ಹರಪನಹಳ್ಳಿಯಲ್ಲಿ ಬಹುದೊಡ್ಡ ಪ್ರಮಾಣದಲ್ಲಿ ಸಂಘಟನೆಯ ಕಾರ್ಯ ನಡೆಯಿತು. ಗಾಂಧೀಜಿಯವರ ಪ್ರವಾಸವು ನೆಪವಾಗಿ ಮತ್ತು ಒಂದು ರಾತ್ರಿ ತಂಗಿದ್ದ ಪರಿಣಾಮವಾಗಿ ಉಳ್ಳವರು ಮತ್ತು ಕೃಷಿ ಭೂಮಿಯುಳ್ಳ ದೊಡ್ಡ ರೈತರು ತಮ್ಮ ಸಮಾಜಮುಖಿ ಚಟುವಟಿಕೆಗೆ ತೊಡಗಿಸಿಕೊಂಡರು. ಗಾಂಧೀಜಿ ಉಳಿದಿದ್ದ ಪ್ರೌಢಶಾಲೆಯ ಒಂದು ಕೊಠಡಿಯನ್ನು ಸ್ಮಾರಕವಾಗಿರಿಸಿರುವುದಷ್ಟೇ ಅಲ್ಲದೇ ಈವರೆಗೂ ಚಪ್ಪಲಿಯನ್ನು ಹೊರಗಿರಿಸಿಯೇ ಪ್ರವೇಶಿಸುವುದು ಅಂದಿನ ಸ್ವಾತಂತ್ರ್ಯ ಮನೋಧರ್ಮದ ಆಧುನಿಕ ಸಂಕೇತವಾಗಿ ಗಮನ ಸೆಳೆಯುತ್ತದೆ. ಕೊಟ್ಟೂರಿನ ಪ್ರದೇಶವಂತೂ ಗಾಂಧೀಜಿಯವರ ಪರಿಣಾಮಿ ವ್ಯಕ್ತಿತ್ವಕ್ಕೆ ಘನಸಂಕೇತವಾಗಿದೆ. ಆ ಕಾಲದಲ್ಲಿ (೧೯೩೪) ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದು ಅಲ್ಲದೇ, ಅಂತರಜಾತೀಯ ವಿವಾಹ, ಧನ–ದ್ರವ್ಯಗಳ ಹರಿಜನ ನಿಧಿ



ಸಂಗ್ರಹ, ದೀನಸೇವಾಶ್ರಮ ಸ್ಥಾಪನೆ, ಗಾಂಧೀಜಿಯವರಿಗೆ ಹತ್ತಾರು ಎಕರೆಯ ತೋಟವನ್ನು ಮೀಸಲಿಡುವುದು. ಇಂಥ ಹಲವು ಸಮಾಜೋರಾಷ್ಟ್ರೀಯ (Socio national) ಕಾರ್ಯಗಳು ಘಟಿಸಿದವು. ಹಗರಿಬೊಮ್ಮನಹಳ್ಳಿ ತಾಲೂಕಿನ ಬನ್ನಿಕಲ್ಲು ಗ್ರಾಮದ ಸಾಹುಕಾರ ವೀರಾಪುರದ ಈಶ್ವರಪ್ಪನವರು ಗಾಂಧೀಜಿಯವರ ಬಳ್ಳಾರಿ ಪ್ರವಾಸಕ್ಕಾಗಿ ಹೊಸ ಕಾರನ್ನು ಖರೀದಿಸಿ ಸ್ವತಃ ತಾವೇ ಚಾಲಕರಾಗಿ ರಾಷ್ಟ್ರಪ್ರೇಮವನ್ನು ನಿರ್ವಹಿಸಿದ್ದರು. ಇವೆಲ್ಲವುಗಳ ಜೊತೆಗೆ ವೈಯಕ್ತಿಕ ಚಳುವಳಿಗಳು ಜಿಲ್ಲೆಯು ಎಚ್ಚರಗೊಂಡಿದ್ದಕ್ಕೆ ಸಾಕ್ಷಿಯಾಗಿತ್ತು. ೧೯೩೪ರ ಗಾಂಧೀಜಿ ಪ್ರವಾಸಕ್ಕೆ ಒಂದು ಸ್ಪಷ್ಟ ಉದ್ದೇಶವೂ ಇದ್ದುದರಿಂದ ಸ್ವಾತಂತ್ರ್ಯ ಹೋರಾಟವೂ ಸೇರಿದಂತೆ ರಚನಾತ್ಮಕ ಯೋಚನೆಗಳಿಗೆ ಎಲ್ಲಾ ವರ್ಗ–ವರ್ಣಗಳ ಜನರಲ್ಲಿ ಜೀವನೋತ್ಸಾಹ ಉಂಟಾಗಿತ್ತು. ಕನ್ನಡ ನಾಡಿಗೂ ಮದ್ರಾಸ್ ಪ್ರಾವೆನ್ಸಿಗೂ ಸಂಬಂಧಿಸಿದಂತೆ ಬಳ್ಳಾರಿ ಜಿಲ್ಲಾ ಕೇಂದ್ರ, ಬಳ್ಳಾರಿ ಜಿಲ್ಲೆಯು ಸಂಕೀರ್ಣವಾಗಿದ್ದರಿಂದ ಈ ಜೀವನೋತ್ಸಾಹವು ಪ್ರಭಾವವನ್ನುಂಟು ಮಾಡಿತ್ತು. ೧೯೩೩–೩೪ರ ಮದ್ರಾಸ್ ಪ್ರಾವೆನ್ಸಿ ಶಾಸನ ಸಭೆಗೆ ಕಾಂಗ್ರೆಸ್‌ಪರ ಉಮೇದು ವಾರಿಕೆ ಪ್ರತಿನಿಧಿಸಬೇಕೋ? ಬೇಡವೋ? ಎಂಬ ಚರ್ಚೆ ನಡೆಯಿತಾದರೂ ಭಿನ್ನಾಭಿಪ್ರಾಯಗಳೇನೂ ಇರಲಿಲ್ಲ. ಕೊನೆಗೂ ನಿರ್ಣಯ ಪರವಾಗಿದ್ದುದರಿಂದ, ೧೯೩೪ ಕೇಂದ್ರ ವಿಧಾನಸಭೆಗೆ ಕಾಂಗ್ರೆಸ್‌ನ ಅನೇಕ ಸದಸ್ಯರು ಸ್ಪರ್ಧಿಸಿ ವಿಜಯಶಾಲಿಗಳಾದರು. ನಂತರದ ೧೯೩೭ರ ಚುನಾವಣೆಯಲ್ಲಿಯೂ ಕಾಂಗ್ರೆಸ್ ಒಂದು ರಾಜಕೀಯ ಪಕ್ಷ ಎಂಬುದಕ್ಕಿಂತಲೂ ಸ್ವಾತಂತ್ರ್ಯ ಚಿಂತನೆಯ ಸಂಘಟನೆಯಾಗಿ ಸ್ಪರ್ಧಿಸಿತ್ತು. ಹೀಗಾಗಿ ೨೧೫ ಸ್ಥಾನಗಳಲ್ಲಿ ಶೇ. ೭೪ರಷ್ಟು ಫಲಿತಾಂಶ ಕಾಂಗ್ರೆಸ್ ಪರವಾಗಿ ಅಂದರೆ ೧೫೯ ಸ್ಥಾನಗಳಲ್ಲಿ ಗೆಲುವು ಪಡೆದರು. ಇದು ಬಳ್ಳಾರಿಗೆ ಸಂಬಂಧಿಸಿದಂತೆ ಮಹತ್ವದ ಬೆಳವಣಿಗೆ. ೧೯೩೪ರ ಗಾಂಧೀಜಿಯ ಪ್ರವಾಸಕ್ಕೂ ೧೯೩೪ರ ಚುನಾವಣೆಗೂ, ಕಾಂಗ್ರೆಸ್ ಸಮಿತಿ ಸಭೆ ಆಯೋಜನೆ ನಿರ್ಣಯಗಳಿಗೂ, ೧೯೩೭ರ ಚುನಾವಣೆಗೂ ನೇರವಾದ ಸಂಬಂಧ ಉಂಟಾಗಿತ್ತು. ಬಳ್ಳಾರಿ ಪರಿಸರದ ಶಾಸನ ಪ್ರತಿನಿಧಿಗಳಾದ ಬೆಲೋಣಿ ಭೀಮರಾವ್, ಹಾಲಹರವಿ ಸೀತಾರಾಮರೆಡ್ಡಿ, ಡಿ.ಗೋವಿಂದದಾಸ್, ಡಾ. ಲಕ್ಷ್ಮೀದೇವಿ ಮತ್ತು ಬಳ್ಳಾರಿಯ ಕಾರಾಗೃಹದಲ್ಲಿ ಬಂಧಿತರಾಗಿ ಜಿಲ್ಲೆಯ ಸ್ವಾತಂತ್ರ್ಯ ಚಳುವಳಿಗೆ ಸ್ಫೂರ್ತಿ ನೀಡಿದ್ದ ಬುಲುಸು ಸಾಂಬಾಮೂರ್ತಿ ಮೊದಲಾದವರು ರಾಷ್ಟ್ರಮಟ್ಟದಲ್ಲಿ ಗಮನ ಸೆಳೆದರು.

೧೯೨೦–೨೧ರ ಅಸಹಕಾರ ಚಳುವಳಿ, ೧೯೩೦–೩೧ರ ಸವಿನಯ ಕಾನೂನುಭಂಗ ಚಳುವಳಿ, ೧೯೪೦ರ ವೈಯಕ್ತಿಕ ಚಳುವಳಿ ಮತ್ತು ೧೯೩೪ರ ಗಾಂಧೀಜಿಯವರ ಜಿಲ್ಲಾ ಪ್ರವಾಸಗಳು–ಆಧುನಿಕ ಬಳ್ಳಾರಿಯ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ ಚರಿತ್ರೆಯ ಮಹತ್ವದ ಘಟ್ಟಗಳು. ದೇಶದ ಬಹುತೇಕ ರಾಷ್ಟ್ರೀಯ ವಿದ್ಯಮಾನಗಳನ್ನು ಜಿಲ್ಲೆ ಗಂಭೀರವಾಗಿ ಪರಿಗಣಿಸಿದ್ದಕ್ಕೆ ಇವು ಸಾಕ್ಷಿಗಳಾಗಿವೆ. ಸ್ವಾತಂತ್ರ್ಯ ಹೋರಾಟವನ್ನು ಜೀವಂತವಾಗಿಯೂ ಹಿಡಿತ ತಪ್ಪದಂತೆ ನೋಡಿಕೊಳ್ಳಬೇಕಾದ ಹೊಣೆಗಾರಿಕೆಯೂ ಜಿಲ್ಲೆಯ ಮುಂಚೂಣಿ ನಾಯಕರಲ್ಲಿರಬೇಕಾಗಿದ್ದರಿಂದ ರಾಷ್ಟ್ರೀಯ ಸಂಪರ್ಕವನ್ನು ಮತ್ತು ಜಿಲ್ಲೆಯ ಉತ್ಸಾಹಿ ಯುವಕರನ್ನು ಸಮಾನಾಂತರವಾಗಿ ನೋಡಿ ಕೊಳ್ಳಬೇಕಾಗಿತ್ತು. ಹೀಗಾಗಿ ಭಾಷೆ, ಶಿಕ್ಷಣಗಳ ವಿಷಯದಲ್ಲಿಯೂ ಸಂಕೀರ್ಣವಾಗಿದ್ದ ಜಿಲ್ಲೆಯು ಇದನ್ನು ನಿರಂತರವಾಗಿ ನೋಡಿಕೊಳ್ಳಲೇ ಬೇಕಾಗಿತ್ತು. ವಿಶೇಷವಾಗಿ ಒಂದು ಕಡೆಗೆ ಬಳ್ಳಾರಿಯನ್ನು ಕನ್ನಡ ನಾಡಿಗೆ ಉಳ್ಳಿಸಿಕೊಳ್ಳುವಂತೆಯೂ ಮತ್ತೊಂದೆಡೆ ದೇಶದ ಸ್ವಾತಂತ್ರ್ಯ ಹೋರಾಟವನ್ನು ತೀವ್ರವಾಗಿರಿಸಿಕೊಳ್ಳುವ ಹುಮ್ಮಸ್ಸಿನಲ್ಲಿ ಪಕ್ಕದ ಆಂಧ್ರಪ್ರದೇಶದ ನಂಟನ್ನು ಎಚ್ಚರವಾಗಿರಿಸಿಕೊಂಡಂತೆಯೂ ಮಾಡಿಕೊಳ್ಳಬೇಕಾಗಿತ್ತು. ಬಳ್ಳಾರಿಯ ಈ ದ್ವಿಭಾಷಾ, ದ್ವಿರಾಜ್ಯ, ಏಕರಾಷ್ಟ್ರ–ಚಿತ್ತ ಮತ್ತು ಚಿಂತನೆಯು ಕನ್ನಡ ನಾಡಿನ ಬೇರೆ ಪ್ರದೇಶಗಳಲ್ಲಿ ಇರಲಿಲ್ಲ ಎಂದೇ ಹೇಳಬೇಕಾಗುತ್ತದೆ. ಸ್ವಾತಂತ್ರ್ಯಪೂರ್ವ ಮತ್ತು ಏಕೀಕರಣಪೂರ್ವದಲ್ಲಿಯೂ ಗಡಿಜಿಲ್ಲೆಯಾಗಿ ಉದ್ವಿಗ್ನತೆಯನ್ನು ಹೊಂದಿದ್ದ ಬಳ್ಳಾರಿ ಜಿಲ್ಲೆಯು ಪ್ರಜ್ಞಾವಂತ ವ್ಯಕ್ತಿಯನ್ನು ಬಹುಮುಖ ನೆಲೆಯಲ್ಲಿ ಸಿದ್ಧಗೊಳ್ಳುವಂತೆ ಪ್ರೇರೇಪಿಸುತ್ತಿತ್ತು. ಬಳ್ಳಾರಿಯ ಸಾಮಾಜಿಕ ಸಂದರ್ಭವಾಗಲೀ, ದೇಶದ ವಿದ್ಯಮಾನವಾಗಲೀ ಹೆಚ್ಚು ಎಚ್ಚರಿಕೆಯಿಂದ ಇರಲೇಬೇಕೆಂಬ ಸ್ಥಿತಿಯನ್ನು ಉಂಟು ಮಾಡಿದ್ದು ಅದಕ್ಕೆ ಸರಿಯಾಗಿ ಇಲ್ಲಿಯ ಹೋರಾಟಗಾರರು ನಡೆದುಕೊಂಡದ್ದು ಉಚಿತವಾಗಿದೆ.

**೧೯೪೨:** ದೇಶದ ಸ್ವಾತಂತ್ರ್ಯ ಹೋರಾಟದ ಚರಿತ್ರೆಯಲ್ಲಿ ಮಹತ್ವದ ಮತ್ತು ನಿರ್ಣಾಯಕ ಹಂತ ತಲುಪಿದ ವರ್ಷ. ಬ್ರಿಟೀಶರಿಗೆ "ಇನ್ನು ಈ ದೇಶದಲ್ಲಿರುವುದು ಕಠಿಣ" ಎಂಬ ಭಾವನೆಯನ್ನು ಮೂಡಿಸಿದ ವರ್ಷ. ಅಸಹಕಾರ ಮತ್ತು ಕಾನೂನುಭಂಗ ಚಳುವಳಿಗಳು ಸ್ವಾತಂತ್ರ್ಯ ಹೋರಾಟಗಾರರ ಹುಮ್ಮಸ್ಸನ್ನು ತೀವ್ರಗೊಳಿಸಿದಂತೆಯೇ ಬ್ರಿಟೀಶರ ಆಡಳಿತಾತ್ಮಕ ನಿಲುವನ್ನು ವಿರೋಧಿಸುವ



ಧೈರ್ಯ ಮೂಡಿತು. ೧೯೪೨ ಆಗಸ್ಟ್ ೯ರಂದು ಮುಂಬಯಿಯ "ಕ್ರಾಂತಿ ಮೈದಾನ"ದಲ್ಲಿ "ಬ್ರಿಟೀಶರೇ, ಭಾರತ ಬಿಟ್ಟು ತೊಲಗಿ" ಚಳುವಳಿಯ "ಮಾಡು ಇಲ್ಲವೇ ಮಡಿ" ಘೋಷಣೆಯು ಭಾರತ ದೇಶದ ಜನರಿಗೆ ಸ್ವಾತಂತ್ರ್ಯ ಪ್ರಾಪ್ತಿಯೇ ಮೊದಲ ಮತ್ತು ಕೊನೆಯ ಉದ್ದೇಶವಾಯಿತು. ರಾಷ್ಟ್ರದ, ರಾಜ್ಯದ ಮತ್ತು ಜಿಲ್ಲೆಯ ಪ್ರಮುಖರು ಬಂಧನಕ್ಕೊಳಗಾಗುತ್ತಿದ್ದಂತೆ ರಣರಂಗ ಸಾದೃಶ್ಯ ಚಿತ್ರವೇ ಮೂಡಿತು. ಬಳ್ಳಾರಿಯೂ ಸೇರಿದಂತೆ ಜಿಲ್ಲೆಯ ತಾಲೂಕು ಕೇಂದ್ರಗಳಲ್ಲಿ ಅಂಚೆ ಕಛೇರಿ, ದೂರವಾಣಿ ಸಂಪರ್ಕ, ಸೇತುವೆ, ಕಾಲುವೆ, ರೇಲ್ವೆ ನಿಲ್ದಾಣಗಳು ಚಳುವಳಿಗಾರರ ಕೆಂಗಣ್ಣಿಗೆ ಗುರಿಯಾದವು. ರಾಜ್ಯದಲ್ಲಿ ನಾಲ್ಕು ವಾರಗಳ ಕಾಲ ರೈಲು ಸಂಚಾರ, ವಾಹನ ಸಂಚಾರ, ಜನಸಂಚಾರ ಸ್ತಬ್ಧಗೊಂಡಿತು. ಬ್ರಿಟೀಶ ಆಡಳಿತ ನೀತಿ ಅಸಾಧಾರಣವಾಗಿ ನಿಯಮಗಳ ಉಲ್ಲಂಘನೆ ಮಾಡಿ ಕಾಂಗ್ರೆಸ್ ಸಮಿತಿ ನಡೆಸುತ್ತಿದ್ದ ಎಲ್ಲಾ ರೀತಿ ಸಭೆಗಳನ್ನು ನಿಷೇಧಿಸಿತು. ಎಲ್ಲಾ ಚಟುವಟಿಕೆಗಳ ಮೇಲೆ ನಿಗಾವಹಿಸಿತು. ಕಾಂಗ್ರೆಸ್ ಕಛೇರಿಗಳನ್ನು ಮುಟ್ಟುಗೋಲು ಹಾಕಿತು. ಜಿಲ್ಲೆಯಲ್ಲಿ ವಿದ್ಯಾರ್ಥಿಗಳು ಶಾಲೆಗಳನ್ನು ತೊರೆದು ಈ ಚಳುವಳಿಯಲ್ಲಿ ಧುಮುಕಿದ್ದು ವಿಶೇಷವಾಗಿತ್ತು. ದೇಶದ ಬಗ್ಗೆ ಅರಿವು ತಂದುಕೊಂಡ ಯುವಸಮುದಾಯ ಮುಂಚೂಣಿ ನಾಯಕರಲ್ಲಿ ಭರವಸೆಯನ್ನುಂಟು ಮಾಡಿತು.

"ಭಾರತ ಬಿಟ್ಟು ತೊಲಗಿ" ಚಳುವಳಿಯ ಶೀರ್ಷಿಕೆ ಕೆಚ್ಚನ್ನುಂಟು ಮಾಡಿದ್ದರೆ, "ಮಾಡು ಇಲ್ಲವೆ ಮಡಿ" ಎಂಬ ಘೋಷಣೆ ಭಾವನಾತ್ಮಕವಾಗಿ ದೇಶದ ಪರಂಪರೆಯನ್ನು ಅಭಿಮಾನ–ಗೌರವಗಳಿಂದ ನೋಡುವಂತೆ ಪ್ರಚೋದಿಸಿತು. ಕನ್ನಡಿಗರು ಇದನ್ನು ಪ್ರಯೋಗಶೀಲ–ಸೃಷ್ಟಿಶೀಲ ಮನೋಧರ್ಮದಲ್ಲಿ ಆವಾಹಿಸಿಕೊಂಡಿದ್ದರಿಂದ "ಕರ್ನಾಟಕ ಮಾದರಿ" ಎಂಬ ನಾಮಧೇಯದಲ್ಲಿ ದೇಶದ ಗಮನ ಸೆಳೆದಿತ್ತು. ಬಳ್ಳಾರಿಯೂ ಇದರಿಂದ ಹೊರತಾಗಿರಲಿಲ್ಲ. ಸರಕಾರಿ ಖಜಾನೆಗಳನ್ನು ವಶಪಡಿಸಿ ಕೊಳ್ಳುವುದು, ಟೆಲಿಫೋನ್ ಸಂಪರ್ಕಗಳನ್ನು ಕಡಿತಗೊಳಿಸುವುದು, ಪೊಲೀಸ್ ಠಾಣೆಗಳಿಂದ ಶಸ್ತ್ರಾಸ್ತ್ರಗಳನ್ನು ಅಪಹರಿಸುವುದು ಮುಂತಾದವುಗಳು "ಕರ್ನಾಟಕ ಮಾದರಿ" ವೈಶಿಷ್ಟ್ಯಗಳಾಗಿದ್ದವು. ಶಾಲೆ–ಕಾಲೇಜುಗಳ ಬಹಿಷ್ಕಾರ ಸಾಮಾನ್ಯವಾಗಿತ್ತು. ಬಳ್ಳಾರಿ ಜಿಲ್ಲೆಯು ಬಳ್ಳಾರಿ ಕೇಂದ್ರದಲ್ಲಿ ಅರ್ಥಪೂರ್ಣವಾಗಿ ಸ್ಪಂದಿಸಿತ್ತು. ಬಳ್ಳಾರಿಯ ಈ ಚಟುವಟಿಕೆಗಳನ್ನು ಸರಕಾರದ ವರದಿಗಳು "೧೯೪೨ರ ಆಗಸ್ಟ್ ಮತ್ತು ಸೆಪ್ಟಂಬರ್ ತಿಂಗಳುಗಳಲ್ಲಿ ನಡೆದ ಹಿಂದೆಂದೂ ಕಾಣದಂತ ವಿಧ್ವಂಸಕ ಕೃತ್ಯಗಳು ಕರ್ನಾಟಕ ಪ್ರಾಂತದ

ಯಾವುದೋ ಒಂದು ಭಾಗಕ್ಕೆ ಸೀಮಿತಗೊಂಡಿರಲಿಲ್ಲ. ಅದು ಪ್ರಾಂತದ ಎಲ್ಲಾ ಜಿಲ್ಲೆಗಳಲ್ಲಿಯೂ ಏಕಕಾಲಕ್ಕೆ ಸಿಡಿಯಿತು" ಎಂದು ದಾಖಲಿಸುತ್ತವೆ. ಇದರಿಂದ "ದೇಶ ಬಿಟ್ಟು ತೊಲಗಿ" ಮತ್ತು "ಮಾಡು ಇಲ್ಲವೆ ಮಡಿ" ಚಳುವಳಿಯ ಶೀರ್ಷಿಕೆ ಮತ್ತು ಘೋಷಣೆಗೆ ರಚನಾತ್ಮಕ ಪ್ರತಿಕ್ರಿಯೆಯಾಗಿತ್ತು. ಆ ಮೂಲಕ ಕರ್ನಾಟಕದಲ್ಲಿಯೇ ಬಳ್ಳಾರಿ ಜಿಲ್ಲೆಯು ಮುಂಚೂಣಿಯಲ್ಲಿತ್ತು. ಬಳ್ಳಾರಿ ಜಿಲ್ಲೆಯ ಕ್ರಿಯಾಶೀಲತೆಯ ವೈಶಿಷ್ಟ್ಯವೆಂದರೆ, ಅಸಹಕಾರ ಚಳುವಳಿಗಿಂತ ಸವಿನಯ ಕಾನೂನುಭಂಗ ಚಳುವಳಿಯು ಸಂಖ್ಯೆ, ಸ್ಥಾನ ಮತ್ತು ಪರಿಣಾಮಗಳಲ್ಲಿ ಪ್ರಗತಿಯನ್ನು ಕಂಡಿತ್ತು. ೧೯೪೨ರ ಚಳುವಳಿಯು ಅಕ್ಷರಶಃ ಜನಾಂದೋಲನವಾಗಿತ್ತು. "ಭಾರತ ಬಿಟ್ಟು ತೊಲಗಿ" ಅಕ್ಷರಶಃ ಭಾರತವನ್ನು ಬಿಟ್ಟು ತೊಲಗುವಂಥ ಸ್ಥಿತಿಯನ್ನೇ ತಂದಿತು. ಈ ಚಳುವಳಿಯು ಸೌಮ್ಯವಾದಿಯೂ ಶಾಂತಿಪ್ರಿಯರೂ ಆದ ಗಾಂಧೀಜಿಯವರನ್ನು ಅಂತರರಾಷ್ಟ್ರೀಯ ಮಟ್ಟದ ವ್ಯಕ್ತಿಯನ್ನಾಗಿ ರೂಪಿಸಿತು. ಅವರು ನೀಡಿದ ಒಂದು ಹೇಳಿಕೆಯು ಚಳುವಳಿಯ ರಾಷ್ಟ್ರೀಯ ಘೋಷಣೆಯಾಗಿ ಗಮನ ಸೆಳೆಯಿತು. "ನಾನೊಂದು ಸಣ್ಣ ಮಂತ್ರವೊಂದನ್ನು ನಿಮಗೆ ನೀಡುತ್ತೇನೆ. ಇದನ್ನು ಮನಸ್ಸಿನಲ್ಲಿ ಅಚ್ಚೊತ್ತಿದಂತೆ ಇಟ್ಟುಕೊಳ್ಳಿ. ಉಸುರಿಗೊಮ್ಮೆ ಮಂತ್ರವನ್ನು ಜಪಿಸುತ್ತಿರಿ. ಆ ಮಂತ್ರ ಯಾವುದೆಂದರೆ– ಮಾಡು ಇಲ್ಲವೆ ಮಡಿ. ಒಂದೋ ದೇಶವನ್ನು ಪಾರತಂತ್ರ್ಯದಿಂದ ಬಿಡುಗಡೆಗೊಳಿಸಬೇಕು. ಇಲ್ಲವೇ ಆ ಪ್ರಯತ್ನದಲ್ಲಿ ಪ್ರಾಣಬಲಿಯಾಗಬೇಕು ಪ್ರತಿಯೊಬ್ಬರೂ ಸ್ತ್ರೀ ಪುರುಷರು ಈ ಕ್ಷಣದಿಂದ ಸ್ವತಂತ್ರರೆಂದು ಭಾವಿಸಿಕೊಳ್ಳಿ. ವಸಾಹತುಶಾಹಿಯ ಭಯವನ್ನು ತೊರೆದು ಮುಕ್ತವಾಗಿ ಬದುಕು ನಡೆಸಿ"– ಗಾಂಧೀಜಿಯವರ ಹೇಳಿಕೆ ಆ ವರೆಗಿನ ಅವರ ವ್ಯಕ್ತಿತ್ವದ ನಿರ್ಭೀತ ಮತ್ತು ನಿಷ್ಠುರ ಗುಣವನ್ನು ಅಭಿವೃದ್ಧಿ ಪಡಿಸಿತು. ಬಳ್ಳಾರಿಯು ಇದನ್ನು ಯಥಾವತ್ತಾಗಿ ಅರ್ಥಮಾಡಿಕೊಂಡಿತ್ತು. ಅಲ್ಲದೇ ಬಳ್ಳಾರಿಯ ಸ್ವಾತಂತ್ರ್ಯ ಹೋರಾಟವು ಚಾರಿತ್ರಿಕವಾದ ಮೇಲ್ಮೆಯನ್ನು ಪಡೆದಿತ್ತು. ಬಳ್ಳಾರಿಯ ಚಲೇಜಾವ್ ಚಳುವಳಿಯಲ್ಲಿ ಸಮಾಜದ ಎಲ್ಲಾ ವರ್ಗದ ವರ್ಣಗಳೂ ಭಾಗವಹಿಸಿದ್ದವು. ಜಾತಿಮತ ಭೇದವೆಣಿಸದೇ ಒಂದೇ ಒಂದು ಪರಿಧಿಯಲ್ಲಿ ಗುರುತಿಸಿಕೊಂಡಿದ್ದು ಅದರಲ್ಲಿಯೂ ದೇಶದ ಒಂದು ವಿದ್ಯಮಾನವೂ ಸೇರಿದಂತೆ ಒಂದಾಗಿದ್ದು ಆಧುನಿಕ ಬಳ್ಳಾರಿಯ ವಿಷಯದಲ್ಲಿ ಮಹತ್ವದ ವಿಚಾರವಾಗಿದೆ. ಅಕ್ಷರಶಃ ಬಳ್ಳಾರಿಯಲ್ಲಿ "ಮಾಡು ಇಲ್ಲವೇ ಮಡಿ" ವಾತಾವರಣ



ಉಂಟಾಗಿತ್ತು. ಜಿಲ್ಲಾ ಕೇಂದ್ರದ ಈ ಜಾಗೃತಿಯು ಎಲ್ಲಾ ತಾಲೂಕುಗಳಿಗೂ ಬಹುತೇಕ ಗ್ರಾಮಗಳಿಗೂ ಹಬ್ಬಿತು. ಹೊಸಪೇಟೆ ಮುನ್ಸಿಪಲ್ ಹೈಸ್ಕೂಲ್ ಕಟ್ಟಡಕ್ಕೆ ಬೆಂಕಿ ಹಚ್ಚಿ ತಮ್ಮ ಅಸಮಾಧಾನ ತೋರಿಸಿದ್ದ ಹೋರಾಟಗಾರರ ಗುಂಪು ಪ್ರಾಣಾರ್ಪಣೆಗೂ ಸಿದ್ಧವಾಗಿತ್ತು.

೧೯೪೨ರ ಚಳುವಳಿ ರಾಷ್ಟ್ರವ್ಯಾಪಿ ತೀವ್ರ ಸ್ವರೂಪ ಪಡೆಯುತ್ತಿದ್ದಂತೆ ಬ್ರಿಟೀಶ ಸರಕಾರ ನಾಯಕರ ಬಂಧನಕ್ಕೆ ಮೊದಲಾಯಿತು. ಗಾಂಧೀಜಿಯವರನ್ನೂ ಒಳಗೊಂಡಂತೆ ರಾಷ್ಟ್ರೀಯ ನಾಯಕರು ಬಂಧನಕ್ಕೆ ಒಳಗಾಗುತ್ತಿದ್ದಂತೆಯೇ ಜಿಲ್ಲೆಯ ನಾಯಕರೂ ಜನಸಾಮಾನ್ಯರೂ ರೋಮಾಂಚನಗೊಂಡಂತೆ ವರ್ತಿಸಿದರು. ಭಾವನಾತ್ಮಕ ವಿಷಯವೂ ಆಗಿದ್ದರಿಂದ ತಮ್ಮ ವೈಯಕ್ತಿಕ ಪರಿಧಿಯ ಆಚೆಯ ದೇಶದ ಚಿಂತನೆಯವರೆಗೂ ವಿಸ್ತಾರವಾಯಿತು. ಮುಗ್ಧ ಜನರಲ್ಲಿಯೂ ಈ ಪರಿವರ್ತನೆಯಾದುದು ವಿಶೇಷವಾಗಿತ್ತು. ಈ ಹಿನ್ನೆಲೆಯಲ್ಲಿ ಬ್ರಿಟೀಶ್ ಸರಕಾರ ಇದನ್ನು ನಿಯಂತ್ರಣಕ್ಕೆ ತಂದುಕೊಳ್ಳಲು ಜಿಲ್ಲಾ ನಾಯಕರನ್ನು ಬಂಧಿಸಿತು. ಟಿ.ಬಿ.ಕೇಶವರಾವ್, ಟೇಕೂರು ಸುಬ್ರಹ್ಮಣ್ಯಂ, ಬಾದನಹಟ್ಟಿ ವೆಂಕೋಬರಾವ್, ಕೆ. ಚಿದಾನಂದಶಾಸ್ತ್ರಿ, ಡಿ. ಆರ್. ಹನುಮಂತರಾವ್, ಮೃತ್ಯುಂಜಯ ಶಾಸ್ತ್ರಿ ಮೊದಲಾದವರನ್ನು ಬಂಧಿಸಲಾಯಿತು. ಈ ಗಣ್ಯರು ಅಪಾರ ಸಂಖ್ಯೆಯ ದೇಶಭಕ್ತರೊಂದಿಗೆ ಬಳ್ಳಾರಿಯ ಬುಲುಸು ಸಾಂಬಾಮೂರ್ತಿ ಮೈದಾನದಲ್ಲಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಿದರು. ದಿನಾಂಕ ೨೬ ಜನವರಿ ೧೯೪೩ರಂದು ನಡೆದ ಈ ಘಟನೆ ಆಂಧ್ರಪ್ರದೇಶ ಗಡಿಯ ಪ್ರಮುಖ ಭಾಗಗಳೂ ಸೇರಿದಂತೆ, ಜಿಲ್ಲೆಯಾದ್ಯಂತ ರಾಷ್ಟ್ರಧ್ವಜಗಳು ಮನೆ ಮನೆಯ ಮೇಲೆ ಹಾರಾಡತೊಡಗಿದವು. ಇದು ಕರ್ನಾಟಕದ ವಿಚಾರದಲ್ಲಿ ಬಳ್ಳಾರಿಯ ಈ ಕಾರ್ಯ ಪ್ರೇರಣಾದಾಯಕವಾಗಿತ್ತು. ರಾಷ್ಟ್ರಧ್ವಜಾರೋಹಣದ ಅನುಬಂಧದಲ್ಲಿ ನಡೆದ ಘಟನಾವಳಿಗಳಲ್ಲಿ ಎಸ್.ಕೆ. ರಾಮಾಚಾರ್, ಬಿ. ಉದ್ದಾನಪ್ಪ. ಕೆ. ಚಂದ್ರಶೇಖರಾಚಾರ್, ಡಿ. ಎಚ್. ಕೃಷ್ಣರಾವ್, ಡಿ. ರಾಮಮೂರ್ತಿ, ಡಾ.ಎಸ್. ವೆಂಕಟರಮಣ, ಎಂ. ಬಿಂದುಮಾಧವ, ಎಸ್. ನಾರಾಯಣರಾವ್, ವೈ. ತಿಮ್ಮಪ್ಪ, ಮದ್ದಾನಪ್ಪ, ಕೆ. ರಾಮಚಂದ್ರ ಗುಪ್ತ, ಕೆ. ಚಂದ್ರಶೇಖರಾಚಾರ್, ಎಸ್. ದೊಡ್ಡನಗೌಡ, ದಾಸರ ದೊಡ್ಡಬಸಪ್ಪ, ಕಟ್ಟೆ ಶ್ರೀನಿವಾಸಾಚಾರ್ಯ, ಅಸುಂಡಿ ತಿರುಮಲರಾವ್, ಎಸ್.ವಿ.ದೇಸಾಯಿ, ಗೇಣಕಿಹಾಳು ಭೀಮಪ್ಪ, ದಳವಾಯಿ ಭೀಮಣ್ಣ, ವಿ. ಹನುಮಂತಪ್ಪ, ಮಾಲಹಳ್ಳಿ

ಗುರುಲಿಂಗಪ್ಪ, ಭದ್ರಶೆಟ್ಟಿ ಸಣ್ಣರುದ್ರಪ್ಪ, ಕೊಟ್ಟೂರು ದೇವೇಂದ್ರಪ್ಪ, ಕೆ. ಸೀತಾರಾಮರಾವ್, ಗೋರ್ಲಿ ಶರಣಪ್ಪ ಮೊದಲಾದವರು ರಾಷ್ಟ್ರಧ್ವಜಾರೋಹಣವನ್ನು ಉಪವಾಸ ಮೂಲಕ ಸತ್ಯಾಗ್ರಹವನ್ನು ಆಚರಿಸಿ ಬಂಧನಕ್ಕೊಳಗಾದರು. ಈ ಚಳುವಳಿಯ ಮತ್ತೊಂದು ಧೈರ್ಯದಾಯಕ ಕಾರ್ಯವೆಂದರೆ, ಬಳ್ಳಾರಿ ಗುಡ್ಡ ಮತ್ತು ಗುಡ್ಡದ ಮೇಲಿರುವ ಚಾರಿತ್ರಿಕ ಹಿನ್ನೆಲೆಯುಳ್ಳದ್ದಷ್ಟೇ ಅಲ್ಲ; ಅದು ಬಳ್ಳಾರಿ ನಗರದ ನೈಸರ್ಗಿಕ ಆಕರ್ಷಣೆಯೂ ಆಗಿದೆ. ಸಾಹಸಪ್ರಿಯ ಯುವಕರಿಗೆ ಚಾರಣಸ್ಥಳವೂ ಆಗಿತ್ತು. ಯುವಕರು ಭಾವನಾತ್ಮಕವಾಗಿ ಚಳುವಳಿಯನ್ನು ಕಂಡಿದ್ದರಿಂದ ಜೀವದ ಹಂಗು ತೊರೆದು ಪಾಲ್ಗೊಂಡಿದ್ದರು. ಸಂದರ್ಭವನ್ನು ಯುವಕರು ಅರ್ಥಪೂರ್ಣವಾಗಿ ಬಳಸಿಕೊಂಡಿದ್ದರು. ಬಳ್ಳಾರಿಯ ಯುವಕರಾದ ಐ. ಬಸವರಾಜ, ಎಸ್. ನಾರಾಯಣರಾವ್ ಮೊದಲಾದ ಸ್ನೇಹಿತರೆಲ್ಲಾ ಸೇರಿ ಬಳ್ಳಾರಿಯ ಗುಡ್ಡವನ್ನೇರಿ ಕೋಟೆಯ ಮೇಲೆ ರಾಷ್ಟ್ರ ಧ್ವಜಾರೋಹಣ ಮಾಡಿದರು.

ರಾಷ್ಟ್ರಪ್ರೇಮವನ್ನು ಪ್ರಮುಖವಾಗಿ ವ್ಯಕ್ತಪಡಿಸಿ ತಮ್ಮ ಸಮಷ್ಟಿ ಪ್ರಜ್ಞೆಯನ್ನು ಪ್ರತಿಸ್ಪಂದನಾ ಶಕ್ತಿಯನ್ನು ತೋರಿಸುವ ಸದವಕಾಶವೆಂದು ಭಾವಿಸಿ ಸಂಕೀರ್ಣವಾಗಿ ತೊಡಗಿಸಿಕೊಂಡರು. ೧೯೪೨–೪೩ರ ಸುಮಾರಿನಲ್ಲಿ ಬಳ್ಳಾರಿಯಲ್ಲಿ ಭಾಷೆ, ಸಂಸ್ಕೃತಿಗಳ ಮಾನದಂಡದಲ್ಲಿ ಅಸ್ತಿತ್ವವೂ ಒಂದು ಸಮಸ್ಯೆಯಾಗಿ ತಲೆದೋರಿತ್ತು. ಈ ಹಿನ್ನೆಲೆಯು ಹೋರಾಟಗಾರರು ದ್ವಿಮುಖ ಒತ್ತಾಸೆಯಲ್ಲಿ ಜೀವನ ಸಿದ್ಧಾಂತ ರೂಪಿಸಿಕೊಳ್ಳಬೇಕಾಗಿತ್ತು.

**೧೯೪೨–೪೩:** ಬಳ್ಳಾರಿ ಜಿಲ್ಲಾ ಕಾರಾಗೃಹ ಮೊದಲ ಪ್ರಧಾನ ಜಿಲ್ಲಾಧಿಕಾರಿ ಕಾಲದಲ್ಲಿ ನಿರ್ಮಿಸಲಾಗಿತ್ತು. ದಕ್ಷಿಣ ಭಾರತದ ಹಳೆಯ ಕಾರಾಗೃಹಗಳಲ್ಲಿ ಒಂದಾಗಿರುವ ಚಾರಿತ್ರಿಕತೆ ಇದೆ. ೧೯೪೨ರಲ್ಲಿ ಜಿಲ್ಲೆಯ, ಜಿಲ್ಲಾ ಪರಿಸರದ ಆಂಧ್ರ ಪ್ರದೇಶದ ಕೆಲವು ನಾಯಕರು, ಕನ್ನಡ ನಾಡಿನ ಪ್ರಮುಖ ನಾಯಕರು ಈ (ಅಲ್ಲೀಪುರ) ಕಾರಾಗೃಹದಲ್ಲಿ ಬಂಧಿತರಾಗಿದ್ದರು. ಎಲ್ಲಾ ಭಾಗದ ಹೋರಾಟಗಾರರು ಒಂದೆಡೆ ಬಂಧಿತರಾಗಿದ್ದಾಗ ನಡೆದ ಚರ್ಚೆ, ಸಂವಾದ, ಮಾತುಕತೆಗಳಲ್ಲಿ ಕನ್ನಡ ನಾಡಿನ ಏಕೀಕರಣ ಕೇಂದ್ರದ ವಿಚಾರಗಳು ಪ್ರಸ್ತಾಪವಾದವು. ಮೊದಲ ಬಾರಿಗೆ ಬಳ್ಳಾರಿಯ (ಜಿಲ್ಲೆಯ) ಸ್ವಾತಂತ್ರ್ಯ ಹೋರಾಟಗಾರರು ಕಾರಾಗೃಹದಲ್ಲಿ ಬಳ್ಳಾರಿ ಜಿಲ್ಲೆಯನ್ನು ಕನ್ನಡ



ಪರಗೊಳಿಸಬೇಕೆಂದು ಯೋಜನೆ ರೂಪಿಸಿಕೊಂಡರು. ಅಲ್ಲಿದ್ದ ಕನ್ನಡಿಗರನ್ನು ಅಂದರೆ ಬಳ್ಳಾರಿ ಜಿಲ್ಲೆಯೇತರ ಕನ್ನಡಿಗರನ್ನು ಒಂದುಗೂಡಿಸಿ ಅನೇಕ ಕಾರ್ಯಕ್ರಮಗಳನ್ನು ಯೋಜಿಸಿದರು. ಕನ್ನಡ ವರ್ತಮಾನ ಪತ್ರಿಕೆಗಳು, ಕನ್ನಡ ಕೈಬರೆಹ ಪತ್ರಿಕೆಗಳು, ಕನ್ನಡ ಪುಸ್ತಕಗಳು ಇವೆಲ್ಲವುಗಳನ್ನೊಳಗೊಂಡ ವಾಚನಾಲಯ–ಗ್ರಂಥಾಲಯವನ್ನು ತಾತ್ಕಾಲಿಕವಾದ ಸ್ಥಳದಲ್ಲಿ ಸ್ಥಾಪಿಸಿದರು. ದ್ವಿಮುಖ ಒತ್ತಾಸೆಯಲ್ಲಿ ಹೋರಾಟಗಾರರು ತಮ್ಮ ಹೊಣೆಗಾರಿಕೆಯನ್ನು ಆವಾಹಿಸಿಕೊಂಡರು. ಈ ಹಿಂದೆ ಲಾಹೋರಿನಲ್ಲಿ ಘೋಷಿಸಿದ್ದ "ಸ್ವಾತಂತ್ರ್ಯ ದಿನ"ವನ್ನು ಆಚರಿಸಿದರು. ಮಹಾನವಮಿಯನ್ನು ಒಂದು ಪೌರಾಣಿಕ ಧಾರ್ಮಿಕ ಹಬ್ಬವನ್ನಾಗಿ ಅಷ್ಟೇ ಅಲ್ಲದೇ, "ನಾಡಹಬ್ಬ"ವನ್ನಾಗಿ ಆಚರಿಸಿ ನಾಡಿನ ಅಸ್ಮಿತೆ–ಅಭೀಪ್ಸೆ ಬಗ್ಗೆ ತಮ್ಮನ್ನು ತಾವು ಜಾಗೃತಗೊಳಿಸಿಕೊಂಡರು. "ಗೆಳೆಯರ ಗುಂಪು" ಎಂಬ ಬಹುದ್ದೇಶಿತ ಸಂಘವನ್ನು ರಚಿಸಿಕೊಂಡರು. ಈ ಗೆಳೆಯರ ಗುಂಪು–ಆ ಕಾಲದಲ್ಲಿ ಮಾಡಿದ ಮಹತ್ವದ ಸಫಲ ಯೋಜನೆಯೆಂದರೆ, ಆಲ್ ಇಂಡಿಯಾ ರೇಡಿಯೋ ಕೇಂದ್ರದಿಂದ ಕನ್ನಡ ಪರ ಯೋಚನೆಗಳನ್ನು ಹಿಂದಿ ಮತ್ತು ಇಂಗ್ಲಿಷ್ ವಾರ್ತೆಗಳಲ್ಲಿಯೂ ಮತ್ತು ಕನ್ನಡದಲ್ಲಿ ವಾರ್ತಾ ಪ್ರಸಾರ ಮಾಡುವಂತೆ ಒತ್ತಾಯ ಮಾಡಿತು. ಬಿಡುಗಡೆಯ ನಂತರ ಬಳ್ಳಾರಿಯಲ್ಲಿ ಕನ್ನಡ ನಾಮಫಲಕ, ಕನ್ನಡ ಪುಸ್ತಕ ಸಂಗ್ರಹ, ಕನ್ನಡ ದಿನಪತ್ರಿಕೆ ಪ್ರಸಾರ, ಪ್ರಾದೇಶಿಕ ಕನ್ನಡ ಪತ್ರಿಕೆಗಳಿಗೆ ಪ್ರೋತ್ಸಾಹ ಮೊದಲಾಯಿತು. ಬ್ರಿಟೀಶ್ ಆಡಳಿತ ಮತ್ತು ತೆಲುಗರ ಉದ್ಧಟತನವನ್ನೊಳಗೊಂಡಂತೆ ವಿಡಂಬನಾತ್ಮಕ "ಶವಸಂಸ್ಕಾರ" ನಾಟಕ ಬರೆದು ಪ್ರದರ್ಶಿಸಲಾಯಿತು. ಎರಡೂ ಹೆಜ್ಜೆಗಳಲ್ಲಿ ಘನಕಾರ್ಯ ಮಾಡಿದವರು ಬಿ.ಎಂ. ಮರುಳಸಿದ್ಧಯ್ಯನವರು. ಸ್ವಾತಂತ್ರ್ಯ ಪೂರ್ವದಲ್ಲಿ "ಕನ್ನಡ–ಕನ್ನಡ ನಾಡು" ಎಂಬ ಶೀರ್ಷಿಕೆಯಲ್ಲಿ "ಬಹುರೂಪ"ದಲ್ಲಿ ತಮ್ಮನ್ನು ಕ್ರಿಯಾಶೀಲಗೊಳಿಸಿಕೊಂಡರು. ಕನ್ನಡ ಸಂತನ ಕನ್ನಡ ಭಿಕ್ಷುಕನ, ಕನ್ನಡ ಜಗದ್ಗುರುವಿನ....ಹೀಗೆ ಮೊದಲಾದ ವೇಷಧಾರಿಯಾಗಿ ಸಂಚರಿಸುತ್ತ ಸಮಾಜದ ಗಮನ ಸೆಳೆದು ಜಾಗೃತಿಯನ್ನುಂಟು ಮಾಡಿದರು.

೧೯೪೨ರ ಚಳುವಳಿಯ ಉಪಉತ್ಪಾದನೆಯೆಂಬಂತೆ ಬಳ್ಳಾರಿ ಅರ್ಥಪೂರ್ಣವಾಗಿ ತೀವ್ರ ಸ್ವರೂಪವನ್ನು ಪಡೆಯುತ್ತಿದ್ದಂತೆ ಭೂಗತ ಚಟುವಟಿಕೆಗಳೂ ನಡೆದವು. ರಾಷ್ಟ್ರೀಯ ನಾಯಕರಲ್ಲಿ ಪ್ರಭಾವಿಗಳಾಗಿದ್ದ ಜಯಪ್ರಕಾಶ ನಾರಾಯಣ ಅವರು ಬಳ್ಳಾರಿಯ ಸತ್ಯವಂತರಾವ್ ಮಲೇಬೆನ್ನೂರು

ಅವರ ಮನೆಯಲ್ಲಿ ಗುಪ್ತ ಆಶ್ರಯ ಪಡೆದಿದ್ದರು. ಬಳ್ಳಾರಿಯ ಹೋರಾಟಗಾರರಿಗೆ ಸುಳುವು ದೊರೆತು ಬ್ರಿಟೀಶರ ವಿರುದ್ಧ ಅವರ ಚಟುವಟಿಕೆಗಳನ್ನು ಬಿರುಸುಗೊಳಿಸಿದರು. ಇದು ಪೊಲೀಸರಿಗೆ ಅನುಮಾನ ಬರುತ್ತಿದ್ದಂತೆಯೇ ಸತ್ಯವಂತರಾವ್ ಅವರು ಜಯಪ್ರಕಾಶ ನಾರಾಯಣರನ್ನು ಸ್ಥಳಾಂತರಿಸಲು ಮತ್ತು ಮುಂಬಯಿಗೆ ಕಳಿಸಲು ಯೋಚನೆ ಮಾಡಿದರು. ಆದರೆ ಅದು ಸುಲಭ ಕಾರ್ಯವಾಗಿರಲಿಲ್ಲ. ಸ್ಥಳೀಯ ಚಳುವಳಿಗಾರರೊಂದಿಗೆ ರೈತರಂತೆ ಸೋಗು ಹಾಕಿಕೊಂಡು ಬಳ್ಳಾರಿಯಿಂದ ಆದವಾನಿಯವರೆಗೆ ಕಾಲ್ನಡಿಗೆಯಲ್ಲಿ ಪ್ರಯಾಣ ಮಾಡಿದರು. ಅದು ಸುಲಭ ಸಾಧ್ಯ ವಿಚಾರವಾಗಿರಲಿಲ್ಲ. ದಾರಿಯುದ್ದಕ್ಕೂ ಹೊಲಗಳಲ್ಲಿ, ದುರ್ಗಮ ದಾರಿಗಳಲ್ಲಿ ವಿಶ್ರಾಂತಿ ಪಡೆದು ಆದವಾನಿ ಸೇರಿ ಅಲ್ಲಿಂದ ಮುಂಬಯಿಗೆ ಪ್ರಯಾಣ ಮಾಡಿದರು. ಇದು ಚಳುವಳಿಗಾರರಿಗೆ ಭೂಗತ ಚಟುವಟಿಕೆಗಳ ವಿಶಿಷ್ಟ ಮತ್ತು ಉಪಯುಕ್ತ ಘಟನೆಯಾಗಿ ಕಂಡು ಬಂದಿತು.

ಆ ಕಾಲದ ತಾಲೂಕು ಕೇಂದ್ರಗಳ ಬಗ್ಗೆ ಪೊಲೀಸರ ನಿಗಾ ಹೆಚ್ಚಾಗಿದ್ದರಿಂದ ಹಳ್ಳಿಗಳಲ್ಲಿ ಭೂಗತರಾಗಿ, ಮಾರುವೇಷಗಳಲ್ಲಿ ನಗರದಲ್ಲಿ ಓಡಾಡುತ್ತ ತಮ್ಮ ಯೋಜನೆಗಳನ್ನು ರೂಪಿಸುತ್ತಿದ್ದರು. ಬಳ್ಳಾರಿಯಲ್ಲಿ ಹತ್ತಕ್ಕೂ ಹೆಚ್ಚು ಭೂಗತರ ಗುಪ್ತತಾಣಗಳಿದ್ದವು. ಭೂಗತ ಹೋರಾಟಗಾರರಿಗೆ ಮಹಿಳೆಯರ ಸಹಭಾಗಿತ್ವವೂ ಇತ್ತು. ಮಹಿಳೆಯರ ಮೇಲೆ ಪೊಲೀಸರ ಉಗ್ರವರ್ತನೆ ಇರಲಿಲ್ಲವೆಂಬುದೂ, ಅವರಿಗೆ ಕಾನೂನು–ನಿಯಮಗಳು ಅಡ್ಡಿಯನ್ನುಂಟು ಮಾಡುತ್ತಿದ್ದವು ಎಂಬುದನ್ನು ಮನಗಂಡಿದ್ದುದರಿಂದ ಮಹಿಳೆಯರು ಎಚ್ಚರಿಕೆಯಿಂದ ಈ ಚಳುವಳಿಯಲ್ಲಿ ಭಾಗವಹಿಸುತ್ತಿದ್ದರು. ಮುಖ್ಯವಾಹಿನಿಯಲ್ಲಿದ್ದ ಟಿ.ಬಿ. ಜಯಲಕ್ಷ್ಮಿದೇವಿ, ಕೋಗಳಿ ರುದ್ರಮ್ಮ, ಡಾ. ಲಕ್ಷ್ಮಿದೇವಿ, ರತ್ನಕಟ್ಟಿ ಚನ್ನಬಸಮ್ಮ, ರಾಮಲಿಂಗಮ್ಮ, ಅಲ್ಲಂ ಸುಮಂಗಳಮ್ಮ ಮೊದಲಾದವರು ಸಾಮಾಜಿಕ ಪ್ರಜ್ಞಾಪೂರ್ವಕವಾದ ಸಂಬಂಧವನ್ನಿರಿಸಿಕೊಂಡಿದ್ದರು.

೧೯೪೨ರಿಂದ ೧೯೪೫ರವರೆಗಿನ "ಭಾರತ ಬಿಟ್ಟು ತೊಲಗಿ" ಚಳುವಳಿಯು ಭಾರತದಲ್ಲಿ ನಿರ್ಣಾಯಕ ಹಂತವನ್ನು ತಲುಪುವುದಕ್ಕೂ ಜಾಗತಿಕ ಮಟ್ಟದಲ್ಲಿ ನಡೆದ ಕೆಲವು ವಿದ್ಯಮಾನಗಳಿಗೂ ನೇರ ಸಂಬಂಧವಿತ್ತು. ಸ್ವತಃ ಭಾರತದ ಆರ್ಥಿಕತೆಯ ಮೇಲೆಯೂ ಈ ಅವಧಿ ಪರಿಣಾಮವನ್ನುಂಟು ಮಾಡಿತು. ಈ ಚಳುವಳಿಯ ಮೂರು ಮುಖ್ಯ ಉದ್ದೇಶಗಳು–ಗಾಂಧೀಜಿಯವರ ಪ್ರಕಾರ ಹೀಗಿದ್ದವು– ಒಂದು; ಅಸ್ಪೃಶ್ಯತೆಯ ನಿರ್ಮೂಲನೆ, ಎರಡು; ಭಾರತ ಸ್ವಾವಲಂಬಿಯಾಗಬೇಕು. ಮೂರು; ಭಾರತ ಭಾವೈಕ್ಯ ರಾಷ್ಟ್ರವಾಗಬೇಕು–ಎಂಬುವು. ವಾಸ್ತವವಾಗಿ ಅಖಂಡ ಭಾರತದಲ್ಲಿ ಈ ಉದ್ದೇಶಗಳು ನೆರವೇರಿದರೆ, ಬ್ರಿಟೀಶರು ಭಾರತದಲ್ಲಿ ಉಳಿಯುವಂತೆಯೇ ಇರಲಿಲ್ಲ. "ಹೊರಗೆ ಹೋಗು ಎನ್ನುವ ಬದಲು ಹೊಗೆ ಹಬ್ಬಿಸಿ ಹೊರ ದಬ್ಬುವ" ತಂತ್ರವು ಈ ಚಳುವಳಿಯ ಧಾತುವಿನಲ್ಲಿತ್ತು.



ಜಾಗತಿಕ ಮಟ್ಟದ ವಿದ್ಯಮಾನಗಳ ಪರಿಣಾಮ ಭಾರತದ ಮೇಲೆಯೂ ಮತ್ತು ಅಷ್ಟೇ ಸಹಜವಾಗಿ ಕರ್ನಾಟಕ, ಬಳ್ಳಾರಿಯಲ್ಲಿಯೂ ಬೀರಿದವು. ಸ್ವಾತಂತ್ರ್ಯ ಪೂರ್ವದಲ್ಲಿ ಮಂಗಳೂರು ಮತ್ತು ಬಳ್ಳಾರಿ ಜಿಲ್ಲೆಗಳು ಮದ್ರಾಸ್ ಪ್ರಾವೆನ್ಸಿಗೆ ಸೇರಿದ್ದವಾದರೂ ಭಾಷೆಯ, ರಾಜ್ಯ ರಚನೆಯ ದೃಷ್ಟಿಯಲ್ಲಿ ಉದ್ವಿಗ್ನತೆಯನ್ನು ತಂದುಕೊಂಡಿದ್ದ ಗಡಿ ಜಿಲ್ಲೆಯಾಗಿ ಬಳ್ಳಾರಿ ಜಿಲ್ಲೆಯಿದ್ದುದರಿಂದ ಸ್ವಾತಂತ್ರ್ಯದ ಸಂದರ್ಭ ಹಲವು ರೀತಿಯ ನೇತ್ಯಾತ್ಮಕ–ಇತ್ಯಾತ್ಮಕ ಒತ್ತಡಗಳಿಗೆ ಒಳಗಾಯಿತು. "ಸ್ವಾತಂತ್ರ್ಯ ಸಿಕ್ಕರೆ ಸಾಕು" ಎಂಬಂಥ ವಾತಾವರಣ ಬೇರೆಡೆ ಇದ್ದಂತೆ ಬಳ್ಳಾರಿ ಜಿಲ್ಲೆಗೆ ಇದ್ದಿರಲಿಲ್ಲ! ಜಾಗತಿಕ ಮಟ್ಟದಲ್ಲಿ ಅನುಲೋಮ ಪ್ರತಿಲೋಮ ಪರಿಣಾಮವನ್ನುಂಟು ಮಾಡಿದ್ದ ೧೯೪೫ರ ಯುದ್ಧವು ಭಾರತದ ಬ್ರಿಟೀಶ್ ಆಳ್ವಿಕೆಯ ಮೇಲೆ ತೀವ್ರ ಪರಿಣಾಮವನ್ನುಂಟು ಮಾಡಿತ್ತು. ೧೯೪೨ರ ಚಳುವಳಿಯು ಭಾರತದ ಒಳಗೆ ಬ್ರಿಟೀಶ್ ಆಡಳಿತಕ್ಕೆ ಬೇಗುದಿಯನ್ನು ತಂದುಕೊಟ್ಟಿತ್ತು. ೧೯೪೫ರ ಯುದ್ಧದಲ್ಲಿ ಬ್ರಿಟನ್ ಪಾಲುದಾರಿಕೆ ವಹಿಸಿದ್ದರಿಂದ ಆದ ನಷ್ಟವನ್ನು ಭಾರತದ ಮೇಲೆ ಒಡ್ಡಿತ್ತು. ಯುದ್ಧ ನಿಂತಿದ್ದರಿಂದ ಬ್ರಿಟನ್ ನಿಟ್ಟುಸಿರು ಬಿಟ್ಟಿತಾದರೂ ಯುದ್ಧದಿಂದಾಗಿ ಬ್ರಿಟನ್ ವಸಾಹತು ವ್ಯವಸ್ಥೆ ಮುಖ್ಯವಾಗಿ ಭಾರತವನ್ನು ಹಾನಿಗೀಡು ಮಾಡಿತು. ಬಳ್ಳಾರಿಯೂ ಅವಜ್ಞೆ–ಅರಾಜಕತೆಯನ್ನು ಹೊಂದಿದ್ದರಿಂದ ಸಹಜವಾಗಿ ಸಂಕಷ್ಟವನ್ನು ಅನುಭವಿಸಿತು.

ಬ್ರಿಟನ್‌ನಲ್ಲಿ ಲೇಬರ್ ಪಕ್ಷ ಅಧಿಕಾರಕ್ಕೆ ಬಂದಿತು. ಕ್ಲೆಮೆಂಟ್ ಆ್ಯಟ್ಲಿ ಬ್ರಿಟನ್ ಪ್ರಧಾನ ಮಂತ್ರಿಯಾದರು. ಪಕ್ಷ ಬದಲಾದಂತೆ ಭಾರತದ ಬಗ್ಗೆ ನಿಲುವು ಬದಲಾಯಿತು. ೧೯೪೨ರ ಚಳುವಳಿಯು ಉಂಟು ಮಾಡಿದ್ದ ಪರಿಸ್ಥಿತಿ, ಭೀತಿಯನ್ನು ಅರ್ಥಮಾಡಿಕೊಂಡಿದ್ದ ಮತ್ತು ತನ್ನ ಜಯಕ್ಕೆ ಇದೂ ಒಂದು

ಕಾರಣವೆಂದು ಭಾವಿಸಿದ್ದ ಆ್ಯಟ್ಲಿಯು ಭಾರತೀಯರ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಸಹಾನುಭೂತಿಯನ್ನು ಹೊಂದಿದ್ದ. ಜಾಗತಿಕ ಮಟ್ಟದಲ್ಲಿ ತನ್ನ, ತನ್ನ ಪಕ್ಷದ ಮತ್ತು ತನ್ನ ಅಧಿಕಾರ ಆಡಳಿತದ ನಿಲುವಿನ ಘನತೆಯನ್ನು ಉಳಿಸಿಕೊಳ್ಳಬೇಕಾಗಿದ್ದರಿಂದ ಬ್ರಿಟನ್ ಸರಕಾರವು ಭಾರತದ ಸ್ವಾತಂತ್ರ್ಯಾಪೇಕ್ಷೆಯನ್ನು ನಿರ್ಣಾಯಕ ಹಂತಕ್ಕೆ ತರಬೇಕಾಗಿತ್ತು; ಈ ಸಮಸ್ಯೆ ಭಾರತದಷ್ಟೇ ಅಲ್ಲದೇ, ಬ್ರಿಟನ್ ಸರಕಾರದ್ದು ಎಂದು ಭಾವಿಸಿತು. ಹೀಗಾಗಿ ಭಾರತದ ಸ್ವಾತಂತ್ರ್ಯದ ಸಮಸ್ಯೆಯನ್ನು ಬಗೆಹರಿಸಬೇಕಾಗಿತ್ತು. ೧೯೪೨ರ ಚಳುವಳಿಯ ಬಂಧಿತ ಹೋರಾಟಗಾರರನ್ನು ಬಿಡುಗಡೆಗೊಳಿಸಿ, ರಾಷ್ಟ್ರೀಯ ಕಾಂಗ್ರೆಸ್ ಮತ್ತು ಇತರ ಪಕ್ಷಗಳ ಮೇಲೆ ಸರಕಾರ ವಿಧಿಸಿದ್ದ ನಿಷೇಧವನ್ನು ತೆಗೆದು ಹಾಕಿತು. ಬಳ್ಳಾರಿಯ ಅಲ್ಲೀಪುರ ಕಾರಾಗೃಹ ಬಂಧಿತರಿಂದ ಮುಕ್ತವಾಯಿತು. ಸೆರೆಮನೆಯಿಂದ ಹೊರಬಂದ ಬಳ್ಳಾರಿ ಹೋರಾಟಗಾರರು ದೆಹಲಿಯ ವಿದ್ಯಮಾನಗಳತ್ತ ಚಿತ್ತ ಹರಿಸಿದರು.

೧೯೪೭ ಆಗಸ್ಟ್ ೧೫ರ ರಾತ್ರಿ ಜಗತ್ತು ಮಲಗಿದ್ದಾಗ, ಭಾರತದಲ್ಲಿ ಸ್ವಾತಂತ್ರ್ಯ ಸೂರ್ಯನ ಬೆಳಕು ಮೂಡಿತ್ತು. ಈ ಸುದ್ದಿ ತಿಳಿಯುತ್ತಿದ್ದಂತೆ, ಬಳ್ಳಾರಿ ನಗರದ ಎಲ್ಲಾ ರೀತಿಯ ಜನರೂ, ವ್ಯಾಪಾರ ವ್ಯವಹಾರ ಮಾಡುತ್ತಿದ್ದವರೂ ತಮ್ಮ ಕೆಲಸ ಕಾರ್ಯಗಳನ್ನು ನಿಲ್ಲಿಸಿ "ಬುಲುಸು ಸಾಂಬಾಮೂರ್ತಿ ಮೈದಾನ"ದಲ್ಲಿ ಸೇರಿದರು. ಸ್ವಾತಂತ್ರ್ಯೋತ್ಸವದ ಪ್ರಥಮ ಧ್ವಜಾರೋಹಣವನ್ನು ನಿರ್ಭೀತವಾಗಿ ನೆರವೇರಿಸಿದರು. ಚಾರಿತ್ರಿಕ ಸಂದರ್ಭವನ್ನು ಬಳ್ಳಾರಿಯ ಜನ ಕಣ್ತುಂಬಿಕೊಂಡರು. ಸ್ವಾತಂತ್ರ್ಯ ಹೋರಾಟಗಾರ, ಹಿರಿಯ ವಕೀಲರಾದ ಟೇಕೂರು ಸುಬ್ರಹ್ಮಣ್ಯಂ ಧ್ವಜಾರೋಹಣ ಮಾಡಿದ್ದೂ ಅಲ್ಲದೇ ಔಪಚಾರಿಕವಾಗಿ ನಡೆದಿದ್ದ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ವಡ್ಡಿ ವೆಂಕೋಬರಾವ್ ಮತ್ತು ಬಿ.ಎಂ. ಮರುಳಸಿದ್ಧಯ್ಯನವರು ಸಭೆಯನ್ನುದ್ದೇಶಿಸಿ ಆ ದಿನದ ಮಹತ್ವವನ್ನು ಸಾರಿದರು. "ಭಾರತ ಮಾತಾಕೀ ಜೈ", "ಮಹಾತ್ಮಾ ಗಾಂಧೀಕೀ ಜೈ" ಘೋಷಣೆ ಗಗನಕ್ಕೆ ಕೇಳಿಸುವಂತಿತ್ತು. ಅತ್ಯುತ್ಸಾಹದ ಚಿರಸ್ಮರಣೀಯವಾದ ಆ ಸಮಾರಂಭದಲ್ಲಿ ಅಂದಿನ ಬಳ್ಳಾರಿ ಜಿಲ್ಲೆಯ ಕಲೆಕ್ಟರ್ ಅನಂತರಾಮ್ ಸಹ ಸಾಕ್ಷಿಯಾಗಿದ್ದರು.

❖ ❖ ❖

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |



| | | | |
|---|---|---|---|
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |